ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 | Issue : 68 | Sunday 17-11-2024 | E-mail : maruti.b.hosamani76@gmail.com | Page: 4 | Price : Rs. 1/-

ನೀತಿ ಸಂಹಿತೆ ಉಲ್ಲಂಘನೆ ದೂರು

ನಡ್ಡಾ, ಖರ್ಗೆಯಿಂದ ಪ್ರತಿಕ್ರಿಯೆ ಕೇಳಿದ ಚು. ಆಯೋಗ

ನವದೆಹಲಿ : ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆಪಿ ನಡ್ಡಾ ಹಾಗೂ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಂದ ಚುನಾವಣಾ ಆಯೋಗ ಪ್ರತಿಕ್ರಿಯೆ ಕೇಳಿದೆ.

ಆಯೋಗ ಎರಡು ಪಕ್ಷಗಳ ನಡುವೆ ದೂರುಗಳನ್ನು ವಿನಿಮಯ ಮಾಡಿಕೊಂಡಿದೆ. ಚುನಾವಣಾ ಆಯೋಗ ಸೋಮವಾರ (ನವೆಂಬರ್ 18) ಮಧ್ಯಾಹ್ನ 1 ಗಂಟೆಯೊಳಗೆ ಪ್ರತಿಕ್ರಿಯೆ ನೀಡುವಂತೆ ಎರಡೂ ಪಕ್ಷದ ಅಧ್ಯಕ್ಷರನ್ನು ಕೇಳಿದೆ.

ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ ಸಾರ್ವಜನಿಕ ಸೌಹಾರ್ದತೆ ಉಂಟಾಗದಂತೆ ತಾರಾ ಪ್ರಚಾರಕರು ಮತ್ತು ನಾಯಕರನ್ನು ಹಿಡಿತದಲ್ಲಿಟ್ಟುಕೊಳ್ಳುವಂತೆ ಆಯೋಗ ನೀಡಿದ್ದ ಈ ಹಿಂದಿನ ಸಲಹೆಯನ್ನು ಅಧ್ಯಕ್ಷರುಗಳಿಗೆ ನೆನಪಿಸಿದೆ.

ತಕ್ಷಣವೇ ಮಹಾರಾಷ್ಟ್ರ ಡಿಜಿಪಿ ವರ್ಗಾವಣೆಗೆ ಚುನಾವಣಾ ಆಯೋಗ ಆದೇಶ: ಕಾರಣ ಇಷ್ಟೇ...

ಮಹಾರಾಷ್ಟ್ರದಲ್ಲಿ ಚುನಾವಣಾ ಪ್ರಚಾರದ ವೇಳೆ ಸಂವಿಧಾನದ ಬಗ್ಗೆ ಸುಳ್ಳು ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಹಿರಿಯ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ರಾಹುಲ್ ಗಾಂಧಿ ಹೇಳಿಕೆಗಳು ರಾಜ್ಯಗಳ ನಡುವೆ

ವೈಷಮ್ಯವನ್ನು ಬಿತ್ತುವ ಉದ್ದೇಶವನ್ನು ಹೊಂದಿವೆ ಎಂದು ಬಿಜೆಪಿ ಆರೋಪಿಸಿದೆ. ನವೆಂಬರ್ 6 ರಂದು, ತಮ್ಮ ಮಹಾರಾಷ್ಟ್ರ ಚುನಾವಣಾ ಪ್ರಚಾರದ ಸಮಯದಲ್ಲಿ, ರಾಹುಲ್ ಗಾಂಧಿ "ರಾಜ್ಯಗಳನ್ನು ಪರಸ್ಪರರ ವಿರುದ್ಧ ಎತ್ತಿಕಟ್ಟಲು" ಪ್ರಯತ್ನಿಸಿದರು ಎಂದು ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಹೇಳಿದ್ದಾರೆ.

ಕಾಂಗ್ರೆಸ್, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಮತ್ತು ಇನ್ನೊಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಎರಡು ಪ್ರತ್ಯೇಕ ದೂರುಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದೆ. ಮಹಾರಾಷ್ಟ್ರ ಮತ್ತು ಜಾರ್ಖಂಡ್‌ನಲ್ಲಿ ನಡೆಯುತ್ತಿರುವ ಪ್ರಚಾರದ ಸಮಯದಲ್ಲಿ ಇಬ್ಬರೂ ನಾಯಕರು ತಮ್ಮ ಭಾಷಣಗಳಲ್ಲಿ ವಿಭಜನೆ, ಸುಳ್ಳು ಹೇಳಿಕೆಗಳನ್ನು ನೀಡಿ–ದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಹಿರಿಯ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಅವರು ಎಕ್ಸ್ ಪೋಸ್ಟ್‌ನಲ್ಲಿ ದೂರಿನ ಪತ್ರಗಳನ್ನು ಲಗತ್ತಿಸಿದ್ದಾರೆ ಮತ್ತು ಚುನಾವಣಾ ನಿಯಮಗಳನ್ನು ಉಲ್ಲಂಘಿಸಿರುವ ಬಿಜೆಪಿ ನಾಯಕತ್ವದ ವಿರುದ್ಧ ತನಿಖೆ ನಡೆಸುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಜಾರ್ಖಂಡ್‌ನಲ್ಲಿ ಎರಡು ಹಂತಗಳಲ್ಲಿ ವಿಧಾನಸಭೆ ಚುನಾವಣೆ ನಡೆಯುತ್ತಿದೆ. ನವೆಂಬರ್ 20 ರಂದು ಎರಡನೇ ಹಂತದ ಮತದಾನ ನಡೆಯಲಿದ್ದು, ಮಹಾರಾಷ್ಟ್ರ ಒಂದೇ ಹಂತದಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಎರಡೂ ರಾಜ್ಯಗಳ ಮತ ಎಣಿಕೆ ನವೆಂಬರ್ 23 ರಂದು ನಡೆಯಲಿದೆ.

2 ನಿವೇಶನ ನೀಡಬೇಕಿದ್ದ ವ್ಯಕ್ತಿಗೆ 19 ನಿವೇಶನ ಹಂಚಿಕೆ

ಮೈಸೂರು : ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಬಗೆದಷ್ಟು ಹಗರಣಗಳು ಒಂದೊಂದಾಗಿ ಬಹಿರಂಗವಾಗುತ್ತಿವೆ. ಮುಡಾದಲ್ಲಿ ಎರಡು ನಿವೇಶನ ನೀಡಬೇಕಿದ್ದ ವ್ಯಕ್ತಿಗೆ 19 ನಿವೇಶನಗಳನ್ನು 50:50 ಅನುಪಾತದಲ್ಲಿ ಪರಿಹಾರವಾಗಿ ಹಂಚಿರುವ ಪ್ರಕರಣ ಬೆಳಕಿಗೆ ಬಂದಿದೆ. ಮುಡಾದಲ್ಲಿ ನಡೆದಿರುವ ಹಗರಣ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ಹಾಗೂ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಚುರುಕುಗೊಳಿಸುತ್ತಿರುವ ಬೆನ್ನಲ್ಲೆ ಮತ್ತಷ್ಟು ಅವ್ಯವಹಾರಗಳು ಬಹಿರಂಗವಾಗುತ್ತಿವೆ. ವ್ಯಕ್ತಿಯೊಬ್ಬರಿಂದ ಭೂಸ್ವಾಧೀನ ಮಾಡಿಕೊಂಡಿರುವ ಬಗ್ಗೆ ಮಾಹಿತಿಯೇ ಇಲ್ಲದೆ ಅವರಿಗೆ 19 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

ಮಹೇಂದ್ರ ಎಂ ವ್ಯಕ್ತಿಗೆ ಸೇರಿದ 2.22 ಎಕರೆ ಭೂಮಿ ಉಪಯೋಗ ಮಾಡಿಕೊಂಡಿರುವುದಾಗಿ ಮುಡಾ ಹೇಳಿಕೊಂಡಿದೆ. ಆದರೆ, ಭೂಮಿ ಸ್ವಾಧೀನ ಪಡಿಸಿಕೊಂಡಿರುವ ಮಾಹಿತಿ ಮುಡಾ ಬಳಿ ಇಲ್ಲದಿರುವುದು ಅಚ್ಚರಿಗೆ ಕಾರಣವಾಗಿದೆ.

ದೇವನೂರು ಗ್ರಾಮದ ಸರ್ವೆ. ನಂ. 81/2 ರಲ್ಲಿ ಮುಡಾ ಭೂಮಿಯನ್ನು ವಶಪಡಿಸಿಕೊಂಡಿತ್ತು. ಆದರೆ, ಈ ಭೂಮಿಯನ್ನು ಯಾವಾಗ ಅಭಿವೃದ್ಧಿಪಡಿಸಲಾಗಿದೆ ಎಂಬ ಮಾಹಿತಿ ಮಾತ್ರ ಮುಡಾದಲ್ಲಿ ಇಲ್ಲವಂತೆ. ಇದಿಷ್ಟೇ ಅಲ್ಲ ದೇವನೂರು ಗ್ರಾಮದ ಭೂಮಿಗೆ ವಿಜಯನಗರ 3ನೇ ಹಂತದಲ್ಲಿ ನಿವೇಶನ ನೀಡಲಾಗಿದೆ ಎಂದು ಮೂಲಗಳು ತಿಳಿಸಿದೆ.

ಪ್ರೋತ್ಸಾಹದಾಯಕ ಯೋಜನೆಯಡಿ ಸ್ವಿಇಚ್ಛೆಯಿಂದ ಬಿಟ್ಟುಕೊಟ್ಟಿರುವುದಾಗಿ ಕ್ರಮಪತ್ರದಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಈ ಯೋಜನೆಗೆ ಕೇವಲ ಎರಡು ನಿವೇಶನಗಳು ಮಾತ್ರ ನೀಡಬೇಕಾಗಿತ್ತು. ಆದರೆ, 40–60 ಮತ್ತು 40–30ರಂತೆ 3,600 ಚದರ ಅಡಿ ಮಾತ್ರ ಪರಿಹಾರ ದೊರೆಯಬೇಕಾಗಿತ್ತು. ಆದ–ರೆ, ಮೈಸೂರು ನಗರದ ಪ್ರಮುಖ ಭಾಗದಲ್ಲೇ 19 ನಿವೇಶನ ನೀಡಲಾಗಿದೆ.

ಇನ್ನೊಂದೆಡೆ ಮುಡಾ ಹಗರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರ ಕೊರಳಿಗೂ ಸುತ್ತಿಕೊಂಡಿ–ದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ನಡೆಸುತ್ತಿರುವ ತನಿಖೆ ಅಂತಿಮ ಹಂತ ತಲುಪಿದೆ ಎಂದು ಹೇಳಲಾಗಿದೆ. ಇನ್ನೊಂದೆಡೆ ಜಾರಿನಿರ್ದೇಶನಾಲಯದ ಅಧಿಕಾರಿಗಳು ವಿಚಾರಣೆ ತೀವ್ರಗೊಳಿಸಿದ್ದಾರೆ.

ಮುಡಾ ಮಾಜಿ ಅಧ್ಯಕ್ಷ ಮರೀಗೌಡ ಸೇರಿದಂತೆ ಮುಖ್ಯಮಂತ್ರಿಗಳ ಆಪ್ತರಾದ ಶಿವಣ್ಣ, ಮಾಜಿ ಆಯುಕ್ತ ನಟೇಶ್, ಮಾಜಿ ತಹಶೀಲ್ದಾರ್ ಮಾಳಿಗೆ ಶಂಕರ್ ಅವರನ್ನು ವಿಚಾರಣೆಗೆ ಗುರಿಪಡಿಸಿ ಮಹತ್ವದ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವೈದ್ಯಕೀಯ ರಂಗದಲ್ಲಿ ತರ್ಕಬದ್ಧ ನಿರ್ವಹಣೆ ಅವಶ್ಯ : ಡಾ. ಬಿ.ಎಸ್. ಪ್ರಸಾದ್

ಬಾಗಲಕೋಟೆ : ವೈದ್ಯಕೀಯ ಶಿಕ್ಷಣದಲ್ಲಿ ತೊಡಗಿಕೊಂಡಿರುವ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ತರ್ಕ ಬದ್ಧ ನಿರ್ವಹಣೆ, ಯೋಜನೆ ಅವಶ್ಯ ಎಂದು ಡಾ. ಬಿ ಎಸ್ ಪ್ರಸಾದ್ ತಿಳಿಸಿದರು.

ನಗರದ ಎಂ ಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ನಡೆದ ಬಿಎಎಂ–ಎಸ್ ಎರಡನೇ ವರ್ಷದ ವಿದ್ಯಾರ್ಥಿಗಳಿಗಾಗಿ ಎನ್ ಸಿಇಎಸ್ ಎಂ ನ ಪಠ್ಯಕ್ರಮ ಕುರಿತ ಎರಡು ದಿನಗಳ ಅಂತರ್ಶಿಸ್ತಿಯ ಹಾಗೂ ಕ್ಯಾನ್ಸರ್ ತಡೆಗಟ್ಟುವ ಕಾರ್ಯಾಗಾರದ ಮುಖ್ಯ ಅತಿಥಿಯಾಗಿ ಹಾಗೂ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ನವದೆಹಲಿಯ ಎನ್ ಸಿಐಎಸ್‌ಎಂ ನ ಆಯುರ್ವೇದಿಕ್ ಮಂಡಳಿಯ ಅಧ್ಯಕ್ಷರಾದ ಡಾ. ಬಿ ಎಸ್ ಪ್ರಸಾದ್ ಮಾತನಾಡುತ್ತಾ ವೈದ್ಯಕೀಯ ವಿದ್ಯಾರ್ಥಿಗಳು ಪ್ರತಿ ಹಂತದಲ್ಲೂ ಪ್ರತಿ ವಿಷಯಗಳ

ಕರ್ಕಬದ್ಧ ಯೋಜನೆ ಹಾಗೂ ನಿರ್ವಹಣೆಯನ್ನು ಕಲಿಯಬೇಕೆಂದರು. ಜೊತೆಗೆ ಕಾಲೇಜಿನ ಕಾರ್ಯಗಾರವನ್ನು ಪ್ರಶಂಶಿಸಿದರು.

ಹಾಸನ ಎಸ್ ಡಿಎಂ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾದ ಡಾ.ಪ್ರಸನ್ನ ಎನ್ ರಾವ್ ಮಾತನಾಡುತ್ತಾ ಶ್ರಮವಹಿಸಿ ಮಾಡುವ ಇಂತಹ ರಾಷ್ಟ್ರಮಟ್ಟದ ಕಾರ್ಯಾಗಾರಗಳು ನೆನಪಿನಲ್ಲಿ ಉಳಿಯಲು ಇವುಗಳ ಕಾರ್ಯಗತಗೊಳ್ಳುವಿಕೆ ಅತ್ಯವಶ್ಯಕ ಎಂದರು.

ಪ್ರತಿಯೊಬ್ಬ ವೈದ್ಯ ವಿದ್ಯಾರ್ಥಿಗಳು ತಮ್ಮ ಸಂಶೋಧನೆಗಳನ್ನು ಹೊರಹಾಕಲು ಕಾರ್ಯಾಗಾರಗಳು ಸಹಾಯಕವಾಗಲಿ ಎಂದು ಟಿಐಈಐ ನ ಅಧ್ಯಕ್ಷರಾದ ಮಾಧುರಿ ಮುಧೋಳ್ ಆಶಿಸಿದರು.

ಮಣಿಪಾಲ್ ಆಯುರ್ವೇದಿಕ್ ಆಸ್ಪತ್ರೆಯ ಪ್ರಾಂಶುಪಾಲರಾದ ಡಾ. ಸತ್ಯನಾರಾಯಣ ಭಟ್ ಅವರು ಇಂದಿನ ದಿನಮಾನಗಳಲ್ಲಿ ಹೆಚ್ಚಾಗಿ ಕಾಣಿಸುತ್ತಿರುವ ಕ್ಯಾನ್ಸರ್ ಅನ್ನ ತಡೆಗಟ್ಟುವ ಹಾಗೂ ಉಪಚರಿಸುವ ವಿಧಾನಗಳನ್ನು ತಿಳಿಸಿಕೊಟ್ಟರು.

ನೂತನವಾಗಿ ಸೆನೆಟ್ ಸದಸ್ಯರಾಗಿ ಆಯ್ಕೆಯಾದ ಡಾ. ಸಂಕನಗೌಡ ಪಾಟೀಲ್ ಹಾಗೂ ಡಾ. ಬಸವರಾಜ್ ಸವದಿ ಅವರನ್ನು ಸನ್ಮಾನಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಕಾಲೇಜಿನ ಡೀನ್ ಆದ ಡಾ.ಶಿವಕುಮಾರ ಗಂಗಾಲ್,ಡಾ.ಈಶ್ವರ್ ಪಾಟೀಲ್, ಡಾ. ಮನೋಹರ ಸಾರಂಗಿ, ಡಾ. ಸಂಜಯ್ ಚಿನೀವಾಲ್, ಡಾ. ದೀಪಾ ಗಂಗಾಲ ಹಾಗೂ ವಿವಿಧ ಕಾಲೇಜುಗಳ ಸುಮಾರು 600 ಕ್ಕೂ ಹೆಚ್ಚು ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.

ಡಾ.ವಿಜಯಕುಮಾರ್ ಚವಡಿ ಸ್ವಾಗತಿಸಿದರು,ಡಾ. ವೀಣಾ ಕುಲಕರ್ಣಿ ಕಾರ್ಯಕ್ರಮದ ವಿವರಣೆ ನೀಡಿದರು.ಡಾ. ಶಿವಕುಮಾರ ಗಂಗಾಲ ವಂದಿಸಿದರು.

ಸಮೀರವಾಡಿ ಸಕ್ಕರೆ ಕಾರ್ಖಾನೆ ಕಬ್ಬು ನುರಿಸುವ ಹಂಗಾಮಿಗೆ ಚಾಲನೆ 3000 ದರ ಘೋಷಣೆ

ಹಳ್ಳೂರ : ಸಮೀರವಾಡಿ ಗೋದಾವರಿ ಬಯೋ–ರಿಫೈನರೀಜ್ ಲಿಮಿಟೆಡ್, ಸಕ್ಕರೆ ಕಾರ್ಖಾನೆಯ ಪ್ರಸಕ್ತ 2024–25 ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನ ಪ್ರಾರಂಭೋತ್ಸವ ಸಮಾರಂಭವು ಶನಿವಾರ ಮುಂಜಾನೆ ಶುಭ ಮುಹೂರ್ತದಲ್ಲಿ ಹೋಮ ಹವನ ವಿಶೇಷ ಪೂಜೆ ಶಾಸ್ತ್ರೋಕ್ತವಾಗಿ ನೆರವೇರಿಸಿ ಕೇನ್ ಕ್ಯಾರಿಯರ್ ದಲ್ಲಿ ಕಬ್ಬು ಹಾಕಿ ರೈತ ಬಾಂಧವರು, ಆಡಳಿತ ಮಂಡಳಿಯ ಯವರು ಚಾಲನೆ ನೀಡಿದರು. ಕಾರ್ಖಾನೆಯ ನಿರ್ದೇಶಕರಾದ ಬಿ ಆರ್ ಬಕ್ಷಿ ಮಾತನಾಡಿ ರೈತ ಬಾಂಧವರು ಪ್ರಸಕ್ತ ಸಾಲಿನಲ್ಲಿ ಅತೀ ಹೆಚ್ಚು ಹಾಗೂ ಒಳ್ಳೆಯ ಗುಣಮಟ್ಟದ ಕಬ್ಬು ಕಾರ್ಖಾನೆಗೆ ಪೂರೈಸಿಸುತ್ತಿರಿ ಎಂಬ ನಂಬಿಕೆ ಇದೆ. ರೈತರ ವಿಶ್ವಾಸವುಳ್ಳ ಕಾರ್ಖಾನೆ ಇದಾಗಿದ್ದು ರೈತರ ಸಹಕಾರದಿಂದ ಉತ್ತಮವಾಗಿ ನಡೆಯುತ್ತಿದ್ದು ಈ ಹಂಗಾಮಿಗೆ 28 ಲಕ್ಷ ಟನ್ ಕಬ್ಬು ನುರಿಸುವ ಗು–ರಿಯನ್ನು ಹೊಂದಿದ್ದೇವೆ.

ಪ್ರಸಕ್ತ ಸಾಲಿನ ಪ್ರತಿ ಟನ್ ಕಬ್ಬಿಗೆ ಬೆಲೆ 3000/– ನೀಡುತ್ತೇವೆ ಎಂದು ಘೋಷಣೆ ಮಾಡಿದರು. ರೈತರು ಬೆಳೆದ ಕಬ್ಬಿಗೆ ಯಾವುದೆ ರೀತಿಯ ಲಗಾನಿ ಇನ್ನಿತರ ತೊಂದರೆ ಆಗದಂತೆ ಸಿಬ್ಬಂದಿಗಳು ಜಾಗೃತ ವಹಿಸಬೇಕೆಂದು ಹೇಳಿದರು. 2024–25 ನೇ ಹಂಗಾಮಿನಲ್ಲಿ ನಿವೃತ್ತಿ ಆಗುತ್ತಿರುವ 18 ಕಾರ್ಮಿಕರಿಗೆ ಸವಿನೆನಪು ಕಾಣಿಕೆ ನೀಡಿ ಸನ್ಮಾನ ನೆರವೇರಿಸಿದರು.

ಈ ಸಮಯದಲ್ಲಿ ಕಾರ್ಖಾನೆಯ ಮುಖ್ಯ ತಾಂತ್ರಿಕ ಅಧಿಕಾರಿ ದಿನೇಶ ಶರ್ಮಾ. ಇಂಜಿನಿಯರ ಜಿ ಎಂ ವಿ ಕೆ ಕಿಲಾರಿ. ಕೇನ ಜಿ ಎಂ ವಿ ಎನ್ ಕಣಬೂರ. ಡಿ ಜಿ ಎಂ ಅಮಿತ್ ತ್ರಿಪಾಠಿ. ಕೆ ಐ ಎ ಎ ಆರ್, ಕುಂಚಗೆ, ಎ ಜಿ ಎಂ ಪಿ ಎ ಮತ್ತು ಐ ಆರ್ ಎಂ ರಾಮಚಂದ್ರ. ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ರಾಮನಗೌಡ ಪಾಟೀಲ.ಕಾರ್ಯದರ್ಶಿ ರಂಗನಗೌಡ ಪಾಟೀಲ. ಕಿಶೋರ್ ಮಸೂರಕರ್, ಡಾ.ಮಾಧವ್ ಬಕ್ಷಿ. ಮಜದೂರ ಯುನಿಯನ್ ಅಧ್ಯಕ್ಷ ಬಸವರಾಜ ಪೂಜೇರಿ. ಬಸವರಾಜ್ ಬದ್ರಶೇಟ್ಟಿ, ಆರ್ ವಿ ಸೋನವಾಲ್ಕರ. ಆನಂದ ಕೋಟಬಾಗಿ, ತಮ್ಮಣ್ಣ ನಾಯಿಕ. ಶಿವನಗೌಡ ಪಾಟೀಲ. ಮಹಾಲಿಂಗ ಸನದಿ. ಲಕ್ಷ್ಮಣ ಕೂಡಲಗಿ.ವಿ ಪಿ ಕಣವಿ. ಕೆ ವಿ ಗೌಡರ. ಬಸು ಮೇಲಪ್ಪಗೋಳ. ನಾಗಪ್ಪ ಮಾಳಿ. ಮನೋಹರ ಬಡಿವಾಳ. ಚನ್ನಪ್ಪ ಅಥಣಿ.ಭೀಮಶಿ ಮಗದುಮ. ಹನಮಂತ ತೇರದಾಳ ವಿನೋದ ಕಮತೆ. ರವಿ ಕೂರಬರ ಮುರಿಗೆಪ್ಪ ಮಾಲಗಾರ.ಸಂಗನಗೌಡ ಪಾಟೀಲ.ಕಲ್ಲಪ್ಪ ವಾಜೆಂತ್ರಿ.ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ರೈತ ಬಾಂಧವರು, ಮಹಿಳಾ ಮಂಡಳ ಹಾಗೂ ಕಾರ್ಮಿಕ ಬಾಂಧವರಿದ್ದರು. ಹೋಮ ಹವನ ಪೂಜಾ ಕಾರ್ಯಕ್ರಮದಲ್ಲಿ ನಿರ್ಮಲಕುಮಾರ ಜಾ. ಪುಂಡಲೀಕ ಬಾಗೇವಾಡಿ.ದಂಪತಿಗಳು ಭಾಗಿಯಾಗಿದ್ದರು.

ಕನ್ನಡ ಭಾಷೆ ಬಳಕೆ ಮೂಲಕ ಯುವ ಸಮೂಹ ಕನ್ನಡಕ್ಕೆ ಶಕ್ತಿ ತುಂಬಲಿ: ಲಕ್ಷ್ಮಣ ಬದಾಮಿ

ಬಾಗಲಕೋಟೆ : ಎರಡು ಸಾವಿರ ವರ್ಷಕ್ಕೂ ಹೆಚ್ಚು ಇತಿಹಾಸವಿರುವ ಕನ್ನಡ ಭಾಷೆ ಇಂದಿಗೂ ಜೀವಂತಿ–ಕೆಯನ್ನು ಉಳಿಸಿಕೊಂಡು ಉತ್ಸಾಹದಲ್ಲಿ ಮೆರೆಯುತ್ತಿರುವ ನಮ್ಮ ಕನ್ನಡ ಭಾಷೆಯನ್ನು ಹೆಚ್ಚು ಬಳಕೆ ಮಾಡುವ ಮೂಲಕ ಯುವ ಸಮೂಹ ಕನ್ನಡಕ್ಕೆ ಮತ್ತಷ್ಟು ಶಕ್ತಿ ವೃದ್ಧಿಸಲಿ ಎಂದು ನಾಡಿನ ಹೆಸರಾಂತ ಕಥೆಗಾರ ಲಕ್ಷ್ಮಣ ಬದಾಮಿ ಹೇಳಿದರು.

ಅವರುನಗರದಬ.ವ್ಹಿ.ವ್ಹಿಸಂಘದಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಕನ್ನಡ ರಾಜ್ಯೋತ್ಸವ ಸಂಭ್ರಮಾಚರಣೆಯ ಮುಖ್ಯ ಅತಿಥಿಗಳಾಗಿ 'ಕನ್ನಡವೆನೆ ಕುಣಿದಾಡುವುದೆನ್ನೆದೆ' ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಕನ್ನಡಕ್ಕೆ ಚರಿತ್ರೆ ಇದ್ದಷ್ಟೇ ದೊಡ್ಡ ಮಟ್ಟದ ಸಂಸ್ಕೃತಿಯೂ ಇದೆ. ಹೆಚ್ಚುತ್ತಿರುವ ಆಂಗ್ಲ ಭಾಷೆಯ ಹೊಸ ಪರಿಭಾಷೆಗೆ ಸಿಲುಕಿ ಕನ್ನಡದ ಹೊಸ ತಲೆಮಾರು ಒಳಗಾಗದೆ ಸದಾ ಕನ್ನಡಿಸುತಿರಲಿ, ಆ ಮೂಲಕ ಪರಂಪರೆಯುದ್ದಕ್ಕೂ ನಡೆದುಕೊಂಡು ಬಂದ ಕನ್ನಡದ ಸಂಸ್ಕೃತಿ, ಕನ್ನಡ

ಹೋರಾಟಗಾರರ ಸದಾಶಯ, ಕನ್ನಡದ ಕಟ್ಟಾಳುಗಳ ಕನಸುಗಳನ್ನು ನನಸಾಗಿಸುವ ಕೈಂಕರ್ಯ ತೊಡಬೇಕಿದೆ ಎಂದು ಸದಾಶಯ ವ್ಯಕ್ತ ಪಡಿಸಿದರು.

ಅಧ್ಯಕ್ಷತೆವಹಿಸಿದ್ದ ಡಾ.ಎಸ್.ಎಂ.ಗಾಂವಕರ ಅವರು ಮಾತನಾಡಿ ಇಂಗ್ಲೀಷ ಭಾಷೆಯ ಪ್ರಭಾವಕ್ಕೆ ಕನ್ನಡಿಗರು ಒಳಗಾಗುತ್ತಿದ್ದೇವೆ ಆತಂಕದಿಂದ ಹೊರಬರೋಣ ಏಕೆಂದರೆ ಇಂಗ್ಲೀಷನ್ನೂ ಕನ್ನಡವನ್ನಾಗಿಸಿಕೊಳ್ಳುವ ಹೊಸ ಬಗೆಯ ಪಾರಿಭಾಷಿಕ ಪದಗಳು ಇತ್ತೀಚಿಗೆ ಹೆಚ್ಚಾಗಿದ್ದು ಇದು ಕನ್ನಡದ ಜೀವಂತಿಕೆಗೆ ಸಾಕ್ಷಿಯಾಗಿದೆ ಎಂದು ಸಂತಸ ವ್ಯಕ್ತ ಪಡಿಸಿದರು.

ಪಿಯುಸಿ ವಿಭಾಗದ ಪ್ರಾಚಾರ್ಯರರಾದ ಡಾ. ಎನ್.ಎಚ್. ಬೇವಿನಹಳ್ಳಿ, ಐಕ್ಯೂಎಸಿ ಸಂಯೋಜಕರಾದ ಡಾ.ಡಿ.ಎಸ್.ಲಮಾಣಿ, ವಿದ್ಯಾರ್ಥಿ ಕಲ್ಯಾಣ ಅಧಿಕಾರಿ ಶ್ರೀಮತಿ ವ್ಹಿ.ಎನ್. ವನಕುದುರೆ ಹಾಗೂ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎ.ಎಮ್. ಸತ್ಯನಾಯಕ ಅವರು ವೇದಿಕೆ ಮೇಲಿದ್ದರು. ಶ್ರೀಮತಿ ಶುಭಾ ಮೇಡಂ ನಿರೂಪಿಸಿ, ಡಾ.ಎ. ಎಮ್.ಸತ್ಯನಾಯಕಸ್ವಾಗತಿಸಿ,ಅತಿಥಿಗಳನ್ನು ಪರಿಚಯಿಸಿದರು. ವಿದ್ಯಾರ್ಥಿನಿಯರು ಪ್ರಾರ್ಥಿಸಿ ಶ್ರೀಹರಿ ಧೂಪದ ವಂದಿಸಿದರು.

ರೆಡ್ ಕ್ರಾಸ್ ಪದಾಧಿಕಾರಿಗಳ ಆಯ್ಕೆ

ಕೊಪ್ಪಳ : ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಸೋಮರಡ್ಡಿ ಅಳವಂಡಿ ಚೇರಮನ್ ಆಗಿ ಆಯ್ಕೆಯಾಗಿದ್ದಾರೆ.

ಭಾನುವಾರ ಸಂಜೆ ನಡೆದ ಕಾರ್ಯಾಕಾರಿ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಡಾ. ಸಿ.ಎಸ್. ಕರಮುಡಿ, ಡ

ಒತ್ತಡದ ಬದುಕಿನಲ್ಲಿ ನಗುವು ಮಾಯವಾಗುತ್ತಿದೆ

ಚಿಮ್ಮಡ : ಇಂದಿನ ಒತ್ತಡದ ಬದುಕಿನಲ್ಲಿ ನಗುವು ಮಾಯವಾಗಿದ್ದು, ಆರೋಗ್ಯದ ಮೂಲವಾಗಿರುವ ನಗುವು ತರಿಸುವ ಮನರಂಜನಾ ಕಾರ್ಯಕ್ರಮಗಳು ಇಂದಿನ ಅವಶ್ಯಕತೆಯಾಗಿವೆ ಎಂದು ಚಿಮ್ಮಡ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು ಹೇಳಿದರು.

ಇಲ್ಲಿನ ರಘುನಾಥಪ್ರಿಯ ಸಾಧು ಮಹಾರಾಜರ ಜಾತ್ರೆಯ ನಿಮಿತ್ಯ ಹಮ್ಮಿಕೊಳ್ಳಲಾಗಿದ್ದ ಅರುಣೋದಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ "ಅರುಣೋತ್ಸವ–2024' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ನಗುವುಮನಸ್ಸಿನಒತ್ತಡವನ್ನುಕಡಿಮೆಮಾಡಿ ಆರೋಗ್ಯವನ್ನು ಸಮಸ್ಥಿತಿಯಲ್ಲಿಡಲು ಸಹಕಾರಿಯಾಗಿದೆ. ನಗುವಿನಿಂದ ಆಯುಷ್ಯ ವೃದ್ಧಿಯಾಗುತ್ತದೆ ಎಂದರು.

ಕಾರ್ಯಕ್ರಮದ ಸಾನಿಧ್ಯವನ್ನು ಓಂಕಾರ ಮಹಾರಾಜರು ವಹಿಸಿದ್ದರು. ಸಂಸ್ಥೆಯ ಅಧ್ಯಕ್ಷ ಕಲ್ಲುಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅಥಿತಿಗಳಾಗಿ ರಬಕವಿ–ಬನಹಟ್ಟಿ ನಗರ ಪ್ರಾಧಿಕಾರದ ಮಾಜಿ ಅಧ್ಯಕ್ಷ ದುಂಡಪ್ಪಾ ಕರಿಗಾರ, ಸಂಗಮೇಶ ಬಾಬಾಗೌಡ ಪಾಟೀಲ, ನ್ಯಾಯವಾದಿ ಮಹೇಶ ಸಿಂಗಿ, ನಂದಕುಮಾರ, ಪಿಕೆಪಿಎಸ್ ಅಧ್ಯಕ್ಷ ಹಣಮಂತ ನೇಸೂರ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶಂಕರ ಬಟಕುರ್ಕಿ, ಅಶೋಕ ಮೋಟಗಿ, ಪ್ರಭು ಮುಧೋಳ, ಮಹಾಲಿಂಗ ಮಾಯಣ್ಣವರ, ರಾಜು ಬಗನಾಳ, ಗ್ರಾಮ ಆಡಳಿತಾಧಿಕಾರಿ ಮಂಜುನಾಥ ನೀಲನ್ನವರ, ಸದಾಶಿವ ಕುಂಬಾರ, ಅರ್ಭಾಜ ಜಮಖಂಡಿ, ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಯೂಟ್ಯೂಬ್ ಕಿಂಗ್ ಖ್ಯಾತಿಯ ಜನಪದ ಗಾಯಕ ಬಾಳು ಬೆಳಗುಂದಿಯವರು ಹಾಡಿದ ಮಸ್ತ್ ಕಾಣತಿ ಲಾವಣ್ಯಾ ಹಾಡು ಹಾಗೂ ಗಾಯಕಿ ತೃಪ್ತಿ ಧಾರವಾಡ, ಸುಶ್ಮಿತಾ ಬೆಂಗಳೂರು ರವರ ಜನಪದ ಮತ್ತು ಚಲನಚಿತ್ರ ಗೀತೆಗಳು ಪ್ರೇಕ್ಷಕರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿದವು. ಖಾಸಗಿ ವಾಹಿನಿಯಲ್ಲಿ ಪ್ರಸಾರವಾಗುವ ಕಾಮಿಡಿ ಕಿಲಾಡಿಗಳು ಶೋ ವಿಜೇತ ಹರೀಶ ಹಿರಿಯೂರು, ಜಗ್ಗಪ್ಪ ಬೆಂಗಳೂರು ಅವರ ಕಾಮಿಡಿ ಪಂಚ್ಗೆ ಪ್ರೇಕ್ಷಕರು ಫಿದಾ ಆದರು. ಅಲ್ಲದೆ ವಿಕೆ ಸ್ಟೈಲ್ ಡಾನ್ಸ ಗ್ರುಪ್ ನಿಂದ ನಡೆದ ನೃತ್ಯ ಕಾರ್ಯಕ್ರಮ ವೀಕ್ಷಕರ ಮನ ಗೆಲ್ಲಲು ಯಶಸ್ವಿಯಾದವು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಕೃಷಿ ಪ್ರಶಸ್ತಿ ವಿಜೇತ ನಿಂಗಣ್ಣ ಪೂಜಾರಿ, ಮಹಾಲಿಂಗಪುರದ ವೈದ್ಯ ಡಾ. ಎ. ಆರ್. ಬೆಳಗಲಿ, ಆದರ್ಶ ಶಿಕ್ಷಕಿ ಪ್ರಶಸ್ತಿ ವಿಜೇತ ಸರಕಾರಿ ಪ್ರೌಢ ಶಾಲೆಯ ಮುಖ್ಯ ಶಿಕ್ಷಕಿ ಶ್ರೀಮತಿ ಎಂ. ಎಸ್. ಜಿಟ್ಟಿ, ವಿಶೇಷ ಸಾಧನೆಗೈದ ವಿದ್ಯಾರ್ಥಿನಿಯರನ್ನು ಸತ್ಕರಿಸಿ ಗೌರವಿಸಲಾಯಿತು.

ಸಂಸ್ಥೆಯ ಉಪಾಧ್ಯಕ್ಷ ಪೈಗಂಬರ ಯಾದವಾಡ, ಪ್ರವೀಣ ಮೈತ್ರಿ, ಲಕ್ಷ್ಮಣ ತಿಮ್ಮಾಪೂರ, ಗುರುಪಾದ ನೇಸೂರ, ಸದಾಶಿವ ಉರಭಿನವರ, ಮಹಾಂತೇಶ ಯಂಕಂಚಿ, ಮಹಾದೇವ ಕೋಳಿ, ಮಹಾಂತೇಶ ಧಡೂತಿ, ಅಲ್ಲಾವುದ್ದೀನ ನದಾಫ, ರಾಘವೇಂದ್ರ ಬಡಿಗೇರ ಉಪಸ್ಥಿತರಿದ್ದರು. ಶಿಕ್ಷಕರಾದ ಪ್ರಕಾಶ ಪುಜಾರಿ ಸ್ವಾಗತಿಸಿ ಸೊಗಸಾಗಿ ನಿರೂಪಿಸಿದರು. ಉಪನ್ಯಾಸಕ ಪ್ರಕಾಶ ಬಡಿಗೇರ ವಂದಿಸಿದರು.

ವಿಘ್ನೇಶ್ವರ, ರಾಜರಾಜೇಶ್ವರಿ ಮೂರ್ತಿಗಳ ಮೆರವಣಿಗೆ

ಬನಹಟ್ಟಿ : ಇಲ್ಲಿನ ಶಿವಶರಣ ಸಿದ್ಧಾರೂಢ ಮಠದಲ್ಲಿ ವಿಘ್ನೇಶ್ವರ ಮತ್ತು ರಾಜರಾಜೇಶ್ವರಿ ಮೂರ್ತಿಗಳ ಪ್ರತಿಷ್ಠಾಪನೆಯ ಅಂಗವಾಗಿ ಭಾನುವಾರ ನಗರದ ಪ್ರಮುಖ ಬೀದಿಗಳಲ್ಲಿ ಮೂರ್ತಿಗಳ ಮೆರವಣಿಗೆ ಮಾಡಲಾಯಿತು.

ಸ್ಥಳೀಯ ಸಿದ್ಧಾರೂಢ ಮಠದಿಂದ ಆರಂಭಗೊಂಡ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮರಳಿ ಮಠವನ್ನು ತಲುಪಿತು.

ಸಮಾಜದ ಗುರುಗಳಾದ ಅಗ್ರಾಣಿಪ್ಪ ಬುದ್ನಿ ಮತ್ತು ಸಿದ್ಧಾರೂಢ ಮಠದ ಅಧ್ಯಕ್ಷರಾದ ವಿರುಪಾಕ್ಷಪ್ಪ ಕೊಕಟನೂರ ಮೆರವಣಿಗೆಗೆ ಚಾಲನೆ ನೀಡಿದರು.

ಮಹಿಳೆಯರು ಆರತಿ ಮತ್ತು ಕುಂಭ ಕಲಶ ಹೊತ್ತು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಕರಡಿ

ಮಜಲು ಮತ್ತು ಡೊಳ್ಳಿನ ಕೈಪೆಟ್ಟು ವಾದನದ ಕಲಾವಿದರು ಮೆರವಣಿಗೆಯಲ್ಲಿ ಎಲ್ಲರ ಗಮನ ಸೆಳೆದರು.

ದಾನಪ್ಪ ಕೊಣ್ಣೂರ, ಮಹಾನಿಂಗಪ್ಪ ಶೀಲವಂತ, ರಾಜು ಬೀಳಗಿ, ಶಂಕರ ಹನಗಂಡಿ, ರಮೇಶ ಸೋರಗಾಂವಿ, ಪ್ರಕಾಶ ಬುರುಡ, ವೈ. ಬಿ. ಕೊರಡೂರ, ರಮೇಶ ಕೊಣ್ಣೂರ, ರವಿ ಬಾಡಗಿ, ಶಂಕರ ಅಥಣಿ, ಶಾಂತಾ ಸೋರಗಾಂವಿ, ಶೈಲಜಾ ನುಚ್ಚಿ, ಮಹಾನಂದ ಕುಳ್ಳಿ, ರಜನಿ ಶೇಕೆ, ಮಹಾದೇವಿ ನುಚ್ಚಿ, ಪಾರ್ವತಿ ಪೂಜಾರಿ, ಮಹಾದೇವಿ ಕಾಡದೇವರ, ಬಾಳವ್ವ ಮಾಲಾಪುರ, ರೇಖಾ ಮಂಡಿ, ಮಾಲಾ ಬಾವಲತ್ತಿ, ಮಹಾದೇವಿ ಕೊಳಕಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ನವೆಂಬರ 13 ರಂದು ಮೂರ್ತಿಗಳ ಪ್ರತಿಷ್ಠಾಪನೆ: 13 ರಂದು ಇಂಚಲದ ಶಿವಾನಂದ ಭಾರತಿ ಸ್ವಾಮೀಜಿಯವರಿಂದ ಮೂರ್ತಿಗಳ ಪ್ರತಿಷ್ಠಾಪನೆಯ ಕಾರ್ಯಕ್ರಮ ನಡೆಯಲಿದೆ.

ಬೈಲಹೊಂಗಲದ ಮಹಾದೇವ ಸರಸ್ವತಿ ಸ್ವಾಮೀಜಿ, ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು, ರಬಕವಿಯ ಗುರುಸಿದ್ಧೇಶ್ವರ ಸ್ವಾಮೀಜಿ, ಇಬ್ರಾಹಿಂಪುರದ ಶಿವಾನಂದ ಸ್ವಾಮೀಜಿ, ಮಹಾಲಿಂಗಪುರದ ಸಹಜಾನಂದ ಸ್ವಾಮೀಜಿ, ಮೈಂದರಗಿಯ ಅಭಿನವ ರೇವಣಸಿದ್ಧ ಸ್ವಾಮೀಜಿ, ಜ್ಞಾನಯೋಗಿ ಚಿದ್ಘಾನಾನಂದ ಸ್ವಾಮೀಜಿ ಪ್ರವಚನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಸಿದ್ಧಾರೂಢ ಮಠದ ಅಧ್ಯಕ್ಷರಾದ ವಿರುಪಾಕ್ಷಪ್ಪ ಕೊಕಟನೂರ ತಿಳಿಸಿದರು.

ಅಭಿವೃದ್ಧಿ ಕಾಮಗಾರಿಗಳು ಕುಂಠಿತ: ಶಾಸಕ ಸಿದ್ದು ಸವದಿ

ರಬಕವಿ–ಬನಹಟ್ಟಿ : ನಗರಸಭೆಯ ಖಾಯಂ ಪೌರ ಕಾರ್ಮಿಕರಿಗೆ ಸರ್ಕಾರ ಸಂಬಳ ನೀಡಬೇಕು. ಆದರೆ ಅದನ್ನು ಕೂಡಾ ನಗರಸಭೆಯವರೆ ಪಾವತಿಸ ಬೇಕಾಗಿರುವುದರಿಂದಮುಂದಿನದಿನಗಳಲ್ಲಿಅಭಿವೃದ್ಧಿ ಕಾಮಗಾರಿಗಳು ಕುಂಠಿತವಾಗಲಿವೆ. ಸರ್ಕಾರದ ಬಳಿ ಹಣ ಇದೆಯೋ ಇಲ್ಲವೋ ಎಂಬುದು ಗೊತ್ತಾಗುತ್ತಿಲ್ಲ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಭಾನುವಾರ ರಬಕವಿ ಬನಹಟ್ಟಿ ನಗರಸಭೆ ವ್ಯಾಪ್ತಿಯ ವಾರ್ಡ 3 ಸಾಯಿ ನಗರ ಬಡಾವಣೆಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ರಬಕವಿ ಬನಹಟ್ಟಿ ನಗರಸಭೆಗೆ ಎರಡೂವರೆ ವರ್ಷಗಳ ಹಿಂದೆ ನಗರೋತ್ಥಾನ ಯೋಜನೆಯಲ್ಲಿ ರೂ. 30 ಕೋಟಿ ಅನುದಾನ ಬಿಡುಗಡೆಯಾಗಿತ್ತು. ಆದರಲ್ಲಿ ಕೇವಲ ಅರ್ಧದಷ್ಟು ಮೊತ್ತದ ಅನುದಾನ ಬಿಡುಗಡೆಯಾಗಿದೆ. ಮುಂದಿನ ಟೆಂಡರನ್ನು ಸರ್ಕಾರ ಕರೆಯುತ್ತಿಲ್ಲ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಯನ್ನು ಕೈಗೊಳ್ಳಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ವಾರ್ಡ್ ಸದಸ್ಯೆ ಗೌರಿ ಮಿಳ್ಳಿ, ಸಾಯಿ ನಗರ ಬಡಾವಣೆ ಮತ್ತು ಮೂರನೇ ವಾರ್ಡಿನಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ, ಸ್ಥಾಯಿ ಸಮಿತಿ ಕಾರ್ಯಾಧ್ಯಕ್ಷ ಅರುಣ ಬುದ್ನಿ, ಪೌರಾಯುಕ್ತ ಜಗದೀಶ ಈಟಿ, ಶ್ರೀಶೈಲ ಬೀಳಗಿ, ಧರೆಪ್ಪ ಉಳ್ಳಾಗಡ್ಡಿ, ಸಂಜಯ ತೆಗ್ಗಿ, ಭೀಮಶಿ ಪಾಟೀಲ, ಡಾ. ಅವಿನಾಶ ಬಡಚಿಕರ, ಶಿವಕುಮಾರ ಬಿರಾದಾರ, ರವಿ ಕೊರ್ತಿ, ಭೀಮು ಬಾಡಗಿ, ಮುತ್ತಪ್ಪ ಚೌಡಕಿ, ಪ್ರಕಾಶ ಬೆಲ್ಲಮ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಿಜೆಪಿ ಜೆಡಿಎಸ್‌ಗೆ ಉಪ ಚುನಾವಣೆಯಲ್ಲಿ ಸೋಲಿನ ಭೀತಿ

ರಬಕವಿ–ಬನಹಟ್ಟಿ : ಮುಂಬರುವ ವಿಧಾನ ಸಭೆಯ ಮೂರು ಉಪ ಚುನಾವಣೆಯಲ್ಲಿ ಮೂಲ ಅಸ್ಪೃಶ್ಯರು ಕಾಂಗ್ರೆಸ್ ಪರವಾಗಿ ಮತದಾನ ಮಾಡಲಿದ್ದಾರೆ ಎಂದು ತಿಳಿದು ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಮುಖಂಡರು ಸೋಲಿನ ಭೀತಿಯಲ್ಲಿದ್ದಾರೆ. ಆದ್ದರಿಂದ ಉತ್ತರ ಕರ್ನಾಟಕದ ಮಾದಿಗ ಸಮಾಜದ ಅಲ್ಪ ಸಂಖ್ಯಾತ ಹಿಂದುಳಿದ ದಲಿತ ನಾಯಕ, ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರರ ಮೇಲೆ ಭ್ರಷ್ಟಾಚಾರದ ಸುಳ್ಳು ಆರೋಪವನ್ನು ಮಾಡುತ್ತಿದ್ದಾರೆ. ಇದು ಖಂಡನೀಯವಾದುದು. ಮುಂದಿನ ದಿನಗಳಲ್ಲಿ ದಲಿತ ಸಂಘರ್ಷ ಸಮಿತಿ ಮತ್ತು ಅಸ್ಪೃಶ್ಯರ ಪಂಚಮ ಜಾತಿಯವರು ಬೀದಿಗಿಳಿದು ಹೋರಾಟ ಮಾಡಲಿದ್ದಾರೆ ಎಂದು ದಲಿತ ಮುಖಂಡ ಚಂದ್ರು ಹುಲ್ಲೆನ್ನವರ ತಿಳಿಸಿದರು.

ಅವರು ಭಾನುವಾರ ರಬಕವಿಯ ನಿರೀಕ್ಷಣಾ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದರು.

ತೇರದಾಳ ಬ್ಲಾಕ್ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ರೇಣುಕಾ ಮಡ್ಡಿಮನಿ ಮಾತನಾಡಿ, ಸುಳ್ಳು ಆರೋಪ ಹೊರಿಸಿ ಮಾದಿಗ ಸಮುದಾಯದ ಸಚಿವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸುವ ಷಡ್ಯಂತ್ರ ಇದಾಗಿದೆ ಎಂದರು.ದಲಿತಸಂಘರ್ಷ ಸಮಿತಿಯಜಿಲ್ಲಾಘಟಕದ ಅಧ್ಯಕ್ಷ ಸುನೀಲ ಹರಿಜನ ಮಾತನಾಡಿ ವಿಧಾನಸಭೆಯ ಮೂರು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲವು ಸಾಧಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗೋಪಾಲ ಮಾಂಗ, ಕುಮಾರ ಮಾಂಗ, ಸುಭಾಸ ನಡುವಿನಮನಿ, ಪರಶುರಾಮ ಮನವ್ವಗೋಳ, ವಾಸು ಕಂಕಣವಾಡಿ, ರಮೇಶ ಗೌಡಿ, ಸೀತಾರಾಮ ಮಾದರ, ಸಿರಾಜ್ ಮೇಲಿನಕೇರಿ, ವಿಷ್ಣು ಗುಡ್ಡದಮನಿ, ಮಾರುತಿ ಮಾದರ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

ಕೆ.ಎಲ್.ಇ. ಸಂಸ್ಥೆಯ ಹುಬ್ಬಳ್ಳಿಯಲ್ಲಿಯ ಬಿ. ವ್ಹಿ. ಬಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಕೆ.ಎಲ್.ಇ. ಸಂಸ್ಥೆಯ ನಿರ್ದೇಶಕ ಶಂಕರಣ್ಣ ಮುನವಳ್ಳಿ, ಡಾಕ್ಟರ ಮೃತ್ಯುಂಜಯ ಶೆಟ್ಟರ್, ಅಂತಾರಾಷ್ಟ್ರೀಯ ಸಂಗೀತಕಾರ ರವೀಂದ್ರ ಬಸವನಾಳ, ಅಶೋಕ್ ಈ. ಚಿಕ್ಕೋಡಿ, ಶಂಕರ್ ಕುಂಬಿ, ಶಿವಯೋಗಿ ತುರಮರಿ, ಮೋನಾ ಅಕ್ಕಿಹಾಳ್, ಮಾಧುರಿ ಅಶೋಕ ಚಿಕ್ಕೋಡಿ, ಪ್ರಿನ್ಸಿಪಾಲ ಅಂಗಡಿ ಉಪಸ್ಥಿತರಿದ್ದರು.

ಕಾಣೆಯಾಗಿದ್ದಾನೆ

ಬನಹಟ್ಟಿ : ಇಲ್ಲಿಯ ಬಸವ ನಗರ ನಿವಾಸಿ, 33 ವಯಸ್ಸಿನ ಚನ್ನಮಲ್ಲಪ್ಪ (ಬಸವರಾಜ) ಅಂಬಿ ಕಾಣೆಯಾಗಿದ್ದಾರೆ. ಕಳೆದ ಸಪ್ಟೆಂಬರ್ 7 ರಂದು ಬೆಳಗಿನ ಜಾವ ತನ್ನ ಮನೆಯಿಂದ ಹೊರಗೆ ಹೋದ ನಂತರ ವಾಪಸ್ ಮನೆಗೆ ಬಂದಿರುವದಿಲ್ಲ. ಈ ಕುರಿತು ಬನಹಟ್ಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆಯಿಂದ ಹೊರಗೆ ಹೋಗುವ ಸಮಯದಲ್ಲಿ ಕಪ್ಪು ಬಣ್ಣದ ಪ್ಯಾಂಟ್, ನೀಲಿ ಬಣ್ಣದ ಶರ್ಟ್ ಧರಿಸಿದ್ದಾರೆ. ಗೋಧಿಗೆಂಪು ಬಣ್ಣ ಹೊಂದಿರುವ ಈ ವ್ಯಕ್ತಿಯು 5–4 ಅಡಿ ಎತ್ತರವಿದ್ದಾನೆ. ಉದ್ದ ಮೂಗು ಹೊಂದಿದ್ದು, ಕನ್ನಡ, ಹಿಂದಿ ಭಾಷೆ ಮಾತನಾಡುತ್ತಾನೆ. ಈ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಬನಹಟ್ಟಿ ಪೊಲೀಸ್ ಠಾಣೆ ಅಥವಾ 08353–230292 ನಂಬರನ್ನು ಸಂಪರ್ಕಿಸಬಹುದು.

ಹುಣಶ್ಯಾಳ ಗ್ರಾಮದಲ್ಲಿ ರೆಡ್ ನೇಪಿಯರ್ ಮೇವಿನ ಬೆಳೆ ಕ್ಷೇತ್ರೋತ್ಸವ

ಕೊಪ್ಪಳ : ಕೊಪ್ಪಳ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವತಿಯಿಂದ ಆಸ್ಟ್ರೇಲಿಯನ್ ಮೂಲದ ರೆಡ್ ನೇಪಿಯರ್ ಹುಲ್ಲು ಹೆಸರಿನ ಮೇವಿನ ಬೆಳೆಯ ಕ್ಷೇತ್ರೋತ್ಸವವು ಇತ್ತೀಚೆಗೆ ಯಲಬುರ್ಗಾ ತಾಲೂಕಿನ ಹುಣಶ್ಯಾಳ ಗ್ರಾಮದಲ್ಲಿ ನಡೆಯಿತು.

ಕ್ಷೇತ್ರೋತ್ಸವಕ್ಕೆ ಆಗಮಿಸಿದ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ವಿಸ್ತರಣಾ ಮುಂದಾಳು ಡಾ. ಎಂ.ವಿ.ರವಿ, ಮಾತನಾಡಿ ಈ ಹುಲ್ಲು ಆಸ್ಟ್ರೇಲಿಯಾ ಮೂಲದ ಮೇವಿನ ಬೆಳೆಯಾಗಿದ್ದು, ಪ್ರಥಮ ಬಾರಿಗೆ ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರನಿಂದ ಮುಂಚೂಣಿ ಪ್ರಾತ್ಯಕ್ಷಿಕೆ ಹಮ್ಮಿಕೊಳ್ಳುವುದರ ಮೂಲಕ ಪರಿಚಯಿಸಲಾಗುತ್ತಿದೆ. ಈ ಹುಲ್ಲು ಪ್ರತಿ ಕೊಯ್ಲಿಗೆ 25–30 ಕೆ.ಜಿ. ತೂಕ ಹೊಂದಿದ್ದು, ರೈತರೇ ಹೇಳುವಂತೆ ಹೆಚ್ಚಿನ ಸಾಂದ್ರತೆ ಹೊಂದಿದ್ದು, ಉತ್ತಮ ಮೇವಿನ ಬೆಳೆಯಾಗಿದೆ. ನಾಟಿ ಮಾಡಿದ ನಾಲ್ಕನೇ

ತಿಂಗಳಿನಿಂದಲೇ ಕೊಯ್ಲಿಗೆ ಬರುವ ಈ ಹುಲ್ಲಿನ ಬೆಳೆ ಪ್ರತಿ ಎಕರೆಗೆ ಪ್ರತಿ ಕಟಾವಿಗೆ 40–50 ಟನ್‌ನಷ್ಟು ಇಳುವರಿ ನೀಡುವ ಸಾಮರ್ಥ್ಯ ಹೊಂದಿದ್ದು, ಎಕರೆಗೆ ಒಂದು ವರ್ಷಕ್ಕೆ 200 ಟನ್‌ನಷ್ಟು ಹಸಿ ಹುಲ್ಲಿನ ಇಳುವರಿ ನೀಡುತ್ತದೆ ಮತ್ತು ಬಹು ಕೊಯ್ಲಿಗೆ ಸೂಕ್ತವಾದ ಈ ಬೆಳೆ ವರ್ಷದಲ್ಲಿ ಎರಡು ತಿಂಗಳಿಗೊಮ್ಮೆ 4–5 ಬಾರಿ ಕೊಯ್ಲು ಮಾಡಬಹುದು. ಪ್ರತಿ ಬಾರಿ ಕೊಯ್ಲಿನ ನಂತರ ಎಕರೆಗೆ 20–25 ಕಿ.ಗ್ರಾಂ. ಸಾರಜನಕಯುಕ್ತ ಗೊಬ್ಬರ ಕೊಡುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು. ಸಾವಯವ ಗೊಬ್ಬರ ನೀಡುವುದು ಇನ್ನೂ ಹೆಚ್ಚಿನ ಅನುಕೂಲಕರವಾಗಿದ್ದು, ರೈತರು ಕಡಿಮೆ ಖರ್ಚಿನಲ್ಲಿ ಈ ಬೆಳೆ ನಿರ್ವಹಣೆಯಿಂದ ಹೆಚ್ಚಿನ ಲಾಭ ಪಡೆಯಬಹುದು ಎಂದು ರೆಡ್ ನೇಪಿಯರ್ ಹುಲ್ಲಿನ ಬೆಳೆ ಬಗ್ಗೆ ಮಾಹಿತಿ ನೀಡಿದರು.

ಪ್ರಗತಿ ಪರ ಯುವ ರೈತ ಅರುಣ ಕುಮಾರ ಮಾತನಾಡಿ ಇದೊಂದು ಉತ್ತಮ ಮೇವಿನ ತಳಿಯಾಗಿದ್ದು, ಬದುವಿನಲ್ಲಿ ಬೆಳೆದರೆ ಇಳುವರಿ ಹೆಚ್ಚಾಗಿರುತ್ತದೆ ಮತ್ತು ನೋಡಲು ಆಕರ್ಷಕವಾಗಿರುತ್ತದೆ. ಹರಿತ ಇಲ್ಲದಿರುವ ಇದರ ಎಲೆಗಳಿಂದ ಜಾನುವಾರುಗಳಿಗೆ ಯಾವುದೇ ಅಪಾಯ ಇರುವುದಿಲ್ಲ. ಈ ಹುಲ್ಲನ್ನುಸಾವಯವಪದ್ಧತಿಯಲ್ಲಿ ಬೆಳೆದರೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಇಳುವರಿ ಕೊಡುತ್ತದೆ ಮತ್ತು ಜಾನುವಾರುಗಳಲ್ಲಿ ಹಾಲಿನ ಉತ್ಪಾದನೆ ಕೂಡ ಹೆಚ್ಚಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಆತ್ಮ ಯೋಜನೆಯ ಕೃಷಿ ಇಲಾಖೆಯ ಯಮನೂರಪ್ಪ, ಪ್ರಕಾಶ ಬಣಕಾರ, ಕ್ಷೇತ್ರ ಸಹಾಯಕರು, ಪ್ರಗತಿಪರ ರೈತರು ಈ ಕ್ಷೇತ್ರೋತ್ಸವದಲ್ಲಿ ಭಾಗವಹಿಸಿದರು.

ಓದಿನ ಜೊತೆಗೆ ಪಠ್ಯೇತರ ಚಟುವಟಿಕೆ ಇದ್ದರೇನೆ ಸಾಧನೆಗೆ ಕಿರೀಟ: ಪಾಂಡೇಯ

ಕೊಪ್ಪಳ : ಮಕ್ಕಳು ಕೇವಲ ಓದಿನ ದಾಸರಾಗದೇ ಪಠ್ಯೇತರ ಚಟುವಟಿಕೆ ಅಳವಡಿಸಿಕೊಂಡರೆ ಸಾಧನೆಗೆ ಕಿರೀಟದಂತೆ ಇರುತ್ತದೆ ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಡೇಯ ಅಭಿಪ್ರಾಯಪಟ್ಟರು.

ಅವರು ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರಾಜ್ಯ ಯುವ ಸಂಘಗಳ ಒಕ್ಕೂಟ, ನೆಹರು ಯುವ ಕೇಂದ್ರಗಳ ಸಂಯುಕ್ತ ಆಶ್ರಯದಲ್ಲಿ ನಡೆದ ಜಿಲ್ಲಾಮಟ್ಟದ ಯುವಜನೋತ್ಸವ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಇನ್ನಷ್ಟು ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರೋತ್ಸಾಹಿಸಲು ಈ ವರ್ಷದ ಅನುದಾನದಲ್ಲಿ ಹೆಚ್ಚಳ ಮಾಡಿಕೊಡಲಾಗುವದು ಅದಕ್ಕಾಗಿ ವಿಶೇಷವಾದ ಕಾರ್ಯಕ್ರಮಗಳನ್

ಬಂಡಿಗಣಿ ಶ್ರೀಗಳ ದಾಸೋಹ ಸೇವೆ ಗಿನ್ನೀಸ್ ದಾಖಲೆಗೆ ಸೇರುವಂಥದ್ದು-ಶ್ರೀಶೈಲ ಶ್ರೀ

ರಬಕವಿ-ಬನಹಟ್ಟಿ : ಯಾವದೇ ಜಾತಿ, ವರ್ಗ, ವರ್ಣ ಬೇಧವಿಲ್ಲದೆ ಸಮಾಜದ ಎಲ್ಲ ಜನರಿಗೂ ಒಳಿತಾಗುವ ದೃಷ್ಟಿಯಿಂದ ಸಮಾಜದ ಏಳ್ಗೆಯೊಂದಿಗೆ ಶಿಕ್ಷಣ ಒದಗಿಸುತ್ತ ಮುಖ್ಯವಾಗಿ ಅನ್ನದಾಸೋಹ ಮಾಡುತ್ತಿರುವ ಬಂಡಿಗಣಿಯ ನೀಲಮಾಣಿಕ ಮಠದ ಶ್ರೀ ಅನ್ನದಾನೇಶ್ವರ ಶ್ರೀಗಳ ಕಾರ್ಯ ಅಪ್ರತಿಮವಾದುದು ಎಂದು ಶ್ರೀಶೈಲ ಪೀಠದ ಜಗದ್ಗುರು ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಗಳು ಹೇಳಿದರು.

ಸೋಮವಾರ ತಾಲೂಕಿನ ಬಂಡಿಗಣಿಯ ನೀಲಮಾಣಿಕ ಮಠದ ಶ್ರೀಗಳಿಗೆ ರಾಜ್ಯೋತ್ಸವ ನಿಮಿತ್ತ ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕಾರಕ್ಕೆ ಅವರನ್ನು ಸನ್ಮಾನಿಸಿ ನಂತರ ಮಾತನಾಡಿದರು.

ಮನುಷ್ಯನಾಗಿ ಜನ್ಮ ಪಡೆಯುವದು ಅಪರೂಪ. ಮೋಕ್ಷ ಪಡೆಯುವ ಇಚ್ಛೇಹೊಂದುವದು ಅಪರೂಪ, ಮೋಕ್ಷದ ಮಾರ್ಗ ತೋರಿಸುವ ಸಮರ್ಥ ಸದ್ಗುರು ದೊರಕುವದೂ ಇನ್ನೂ ಅಪರೂಪ. ಈ ಮೂರು ಅಪರೂಪದ ಯೋಗಗಳನ್ನು ಪಡೆಯುತ್ತಿರುವ ಭಕ್ತರ ಭಾಗ್ಯವೆಂದರು.

ದಾಸೋಹದ ಮೂಲಕ ಚಕ್ರವರ್ತಿಯಾಗಿ ರಾಜ್ಯವಷ್ಟೇ ಅಲ್ಲದೆ ನೆರೆಯ ರಾಜ್ಯಗಳಲ್ಲಿಯೂ ಅನ್ನದಾಸೋಹ ಮೂಲಕ ಸೈ ಎನ್ನಿಸಿಕೊಂಡಿರುವ ಅನ್ನದಾನೇಶ್ವರ ಶ್ರೀಗಳ ಕಾರ್ಯ ವಿಶ್ವವ್ಯಾಪಿ ಹರಡಲೆಂದು ಶ್ರೀಶೈಲ ಶ್ರೀಗಳು ಹಾರೈಸಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಅನ್ನದಾನೇಶ್ವರ ಶ್ರೀಗಳು, ದಾಸೋಹವಿಲ್ಲದೆ ಕಾಯಕವಾಗದು, ಕಾಯಕ-ದಾಸೋಹಗಳ ಜೊತೆ ಸೇರುವ ಇನ್ನೊಂದು ತತ್ವ ಪ್ರಸಾದ-ವ್ಯಾವಹಾರಿಕ ಅರ್ಥದಲ್ಲಿ ಊಟ. ಸತ್ಯ ಶುದ್ಧ ಕಾಯಕದಿಂದ ಸಮಾಜದ ಶ್ರೇಯಸ್ಸಿಗೆ ದಾಸೋಹದ ಮೂಲಕ ಬಳಸಿದಾಗ ತಾನುಣ್ಣುವ ಊಟ ಪ್ರಸಾದವೆಂದರು.

ಕೊಣ್ಣೂರಿನ ಹೊರಗಿನ ಕಲ್ಯಾಣಮಠದ ಡಾ. ಶ್ರೀ ವಿಶ್ವಪ್ರಭುದೇವ ಮಹಾಸ್ವಾಮಿಗಳು, ಜಮಖಂಡಿ ಮುತ್ತಿನಕಂತಿಮಠದ ಶ್ರೀ ಶಿವಲಿಂಗ ಪಂಡಿತಾರಾಧ್ಯ ಸ್ವಾಮಿಗಳು, ಬಾವಲತ್ತಿ ಶ್ರೀಗಳು, ಶಿವಾನಂದ ಹಿರೇಮಠ ವೇದಿಕೆ ಮೇಲಿದ್ದರು. ಸುಮಾರು 10 ಸಾವಿರಕ್ಕೂ ಅಧಿಕ ಭಕ್ತರು ನೆರೆದಿದ್ದು ವಿಶೇಷವಾಗಿತ್ತು.

"ಕಲಬುರಗಿ ಸ್ಮಾರ್ಟ್ ಸಿಟಿ" ಸಿಎಂ ತೋರಿಸುವ ಹಗಲು ನಕ್ಷತ್ರ: ದೇವಿಂದ್ರ ದೇಸಾಯಿ ಕಲ್ಲೂರ

ಕಲಬುರಗಿ : ಕಲ್ಯಾಣ ಕರ್ನಾಟಕದಲ್ಲಿ ಅಭಿವೃದ್ಧಿಗೆ ಒತ್ತು ಎಂಬ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಕಲ್ಯಾಣ ಕರ್ನಾಟಕದ ಜನರ ಕಣ್ಣಿಗೆ ಸುಣ್ಣ ಹಚ್ಚುವ ಕೆಲಸ ಮಾಡುತ್ತಾ ಬಂದಿದ್ದಾರೆ, ಅದರ ಮುಂದುವರೆದ ಭಾಗವಾಗಿ ಕಲಬುರಗಿ ನಗರ ಸ್ಮಾರ್ಟ್ ಸಿಟೀ ಮಾಡಲು 1685 ಕೋಟಿ ರೂ. ಬಿಡುಗಡೆ ಕ್ರಮಕೈಗೊಳ್ಳುತ್ತೇನೆ ಎಂದು ಹೇಳಿ ತಿಂಗಳೇ ಕಳೆದು ಹೋಗಿದೆ. ಇದ-ರಿಂದಾಗಿ ಕಲ್ಯಾಣ ಕರ್ನಾಟಕದ ಜನರಿಗೆ ಸಿದ್ದರಾಮಯ್ಯನವರು ಹಗಲಿನಲ್ಲಿ ನಕ್ಷತ್ರ ತೋರಿಸುತ್ತಿದ್ದಾರೆಯೇ ಎಂಬ ಸಂಶಯ ಮೂಡಿತ್ತಿದೆ ಎಂದು ಬಿಜೆಪಿಯ ಕಲಬುರಗಿ ನಗರ ಓಬಿಸಿ ಮೋರ್ಚಾದ ನಗರಾಧ್ಯಕ್ಷ ದೇವಿಂದ್ರ ದೇಸಾಯಿ ಕಲ್ಲೂರ ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ ಅಂಗವಾಗಿ ನಗರದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡಿ ಕೇವಲ ನಾಮಕವಾಸ್ತೆ ಎಂಬಂತೆ ಸಚಿವ ಸಂಪುಟ ಸಭೆ ನಡೆಸಿದರು. ಸಭೆಯಲ್ಲಿ ಯಾವುದೇ ಗಂಭೀರವಾದ ವಿಷಯಗಳ ಕುರಿತು ಚರ್ಚೆ ಮಾಡಲಿಲ್ಲ ಎನ್ನುವದು ಅವರ ಹೇಳಿಕೆಯಿಂದಲೇ ತಿಳಿಯುತ್ತದೆ. ಇನ್ನೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇವಲ ಸಭೆ ಸಮಾರಂಭಗಳಿಗೆ ಮಾತ್ರ ಸೀಮಿತವಾಗಿದ್ದಾರೆ. ಒಂದು ದಿನವು ನಗರ ಸಂಚಾರ ಮಾಡಲಿಲ್ಲ. ನಗರದಲ್ಲಿ ರಸ್ತೆಗಳು ಹಾಳಾಗಿ ಕೆಟ್ಟು ಕೆರಹಿಡಿದಿವೆ. ಜಿಲ್ಲಾದ್ಯಂತದ ರಸ್ತೆಗಳ ಗತಿ ಏನು? ಕೇವಲ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿಗಳ ಮುಂದೆ ಮಾತ್ರ ದರ್ಪ ಎನ್ನುವಂತಾಗಿದೆ ಅವರದು. ದರ್ಪದಿಂದ ಅಧಿಕಾರ ಮಾಡಿದಂತಯೇ ಅಭಿವೃದ್ಧಿಯನ್ನು ಮಾಡಿ ದರ್ಪ ತೋರಿಸಲಿ ಎನ್ನುವದು ನಮ್ಮ ಸವಾಲಾಗಿದೆ.

ಕಲ್ಯಾಣ ಪಥ ಎಂದು ಮುಖ್ಯಂತ್ರಿಗಳು ಹೇಳಿದ್ದಾರೆ. ಆದರೆ ಕಲ್ಯಾಣ ಕರ್ನಾಟಕದಲ್ಲಿ ಇದುವರೆಗೆ ಯಾವ ಜಿಲ್ಲೆಯಲ್ಲಿ ಕಲ್ಯಾಣ ಪಥದ ಕುರಿತು ಒಂದು ಉದ್ಘಾಟನಾ ಕಾರ್ಯಕ್ರಮ ನಡೆಯಲಿಲ್ಲ. ಕಲ್ಯಾಣ ಪಥದ ರಥವು ಸಿಎಂ ಕುರ್ಚಿ ಉಳಿಸಿಕೊಳ್ಳುವಲ್ಲಿ ನಿರವಾಗಿದೆಯೇ? ಎನ್ನುವದು ರಾಜ್ಯ ಜನತೆಗೆ ಕಾಣುತ್ತಿದೆ.

ಮಹಾತ್ಮ ಗಾಂಧಿ ವಿಕಾಸ ಯೋಜನೆಯಡಿಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಗೆ 200 ಕೋಟಿ ರೂ. ಒದಗಿಸಲು ಸಿಎಂ ರಿಂದ ಹೇಳಿಕೆ ನೀಡಲಾಗಿದೆ. ಮಹಾನಗರ ಪಾಲಿಕೆಯಲ್ಲಿನ ಅಧಿಕಾರಿಗಳು ಅತ್ಯಂತ ಭ್ರಷ್ಟರು ಎನ್ನವುದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುವ ಮಾತನಾಗಿದೆ. ಈ ಮುನ್ನ ಬಿಜೆಪಿ ಸರ್ಕಾರವು ಅಧಿಕಾರದಲ್ಲಿರುವಾಗಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 5 ಸಾವಿರ ಕೋಟಿ ರೂ. ಅನುದಾನ ನೀಡಲಾಗಿತ್ತು. ಅದರಲ್ಲಿ ಮಹಾನಗರ ಪಾಲಿಕೆಯಿಂದ ರಸ್ತೆ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ನೀಡಲಾಗಿದೆ ಎನ್ನಲಾಗಿದೆ. ಆದರೆ ಭ್ರಷ್ಟ ಅಧಿಕಾರಿಗಳಿಂದಾಗಿ ನಗರದಲ್ಲಿನ ಯಾವ ರಸ್ತೆಗಳು ಕೂಡ ಇಂದೂ ಅಭಿವೃದ್ಧಿಯಾಗಿಲ್ಲ.

ರಸ್ತೆಗಳ ಅಭಿವೃದ್ಧಿಯ ಹೆಸರಲ್ಲಿ ಅಧಿಕಾರಿಗಳು ಕೊಳ್ಳೆ ಹೊಡೆದಿದ್ದಾರೆ ಎಂಬ ಮಾತುಗಳು ಎಲ್ಲರಿಗೂ ತಿಳಿದ ವಿಷಯವಾಗಿದೆ. ಭ್ರಷ್ಟ ಅಧಿಕಾರಿಗಳೊಂದಿಗೆ ಕಾಂಗ್ರೆಸ್‌ನವರು ಕೈಜೋಡಿಸಿದ್ದಾರೆ ಎನ್ನುವ ಸಂಶಯ ಮೇಲ್ನೋಟಕ್ಕೆ ಕಾಣುತ್ತಿದೆ ಎಂದು ಅವರ ತಮ್ಮ ಹೇಳಿಕೆ ಮುಖಾಂತರ ವ್ಯಕ್ತ ಆಕ್ರೋಶ ಪಸಿಡಿದ್ದಾರೆ.

ಕೊಪ್ಪಳದ ಅಂಜನಾದ್ರಿ ಬೆಟ್ಟ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಅಭಿವೃದ್ಧಿ ಪಡಿಸಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಕೂಡ ಸಿಎಂ.ಸಿದ್ದರಾಮಯ್ಯ ನವರು ಹೇಳಿ ಅದಕ್ಕಾಗಿ 100 ಕೋಟಿ ರೂ. ಬಿಡುಗಡೆಗೆ ಕ್ರಮಕೈಗೊಳ್ಳಲಾಗುದು ಎಂದು ಹೇಳಿದರು. ಆದರೆ ಇದುವರೆಗೂ ನಯಾಪೈಸೆ ಕೂಡ ಬಿಡುಗಡೆ ಮಾಡಲಿಲ್ಲ. ಅಲ್ಲಿ ಅಂಜನಾದ್ರಿ ಬೆಟ್ಟಕ್ಕೆ ಬರವ ಪ್ರವಾಸಿಗರು ತುಂಬ ಕಷ್ಟ ಪಡುತ್ತಿದ್ದಾರೆ. ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿ ಅಭಿವೃದ್ಧಿ ಹೆಸರಲ್ಲಿ ಕಲ್ಯಾಣ ಕರ್ನಾಟಕ ಜನರಿಗೆ ಮಲತಾಯಿ ಧೋರಣೆಯನ್ನು ಸದಾ ಕಾಂಗ್ರೆಸ್ ಪಕ್ಷದವರು ತೋರಿತ್ತಾ ಬಂದಿದ್ದಾರೆ ಎನ್ನುತ್ತಾರೆ. ಕೂಡಲೇ ಕೊಟ್ಟ ಮಾತಿಗೆ ಬದ್ಧರಾಗಿ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಬೇಕು ಎಂದು ಬಿಜೆಪಿಯ ಬಿಜೆಪಿಯ ಕಲಬುರಗಿ ನಗರ ಓಬಿಸಿ ಮೋರ್ಚಾದ ನಗರಾಧ್ಯಕ್ಷ ದೇವಿಂದ್ರ ದೇಸಾಯಿ ಕಲ್ಲೂರ ಒತ್ತಾಯಿಸಿದಾರೆ.

ಜನಮನಸೂರೆಗೊಂಡ ಸಂಗೀತ ನೃತ್ಯ ಸಂಭ್ರಮ

ಜನರಂಜನ, ಜನ ಶಿಕ್ಷಣ ಜನಕಲ್ಯಾಣ ಈ ಮೂರು ಮೌಲ್ಯಗಳನ್ನು ಹೊಂದಿರತಕ್ಕಂತ ಸಂಗೀತ ಮತ್ತು ಸಾಹಿತ್ಯ ಸರ್ವಕಾಲಕ್ಕೂ ಸಲ್ಲುವಂತಹದು ಎಂದು ಹಿರಿಯ ಜಾನಪದ ವಿದ್ವಾಂಸರಾದ ಪ್ರೊ. ಬಿ.ಆರ್. ಪೊಲೀಸ್ ಪಾಟೀಲರು ಹೇಳಿದರು.

ಅವರು ಇತ್ತೀಚಿಗೆ ಬೆಂಗಳೂರಿನ ಶರಣ್ಸ್ ಮ್ಯೂಸಿಕ್ ಅಕಾಡೆಮಿಯ ಕನ್ನಡ ರಾಜ್ಯೋತ್ಸವ -2024 ಹಾಗೂ ಸಂಗೀತ-ನೃತ್ಯ ಸಂಭ್ರಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜನಪದರು ಜನರಂಜನ, ಜನ ಶಿಕ್ಷಣ, ಜನಕಲ್ಯಾಣ ಎಂಬ ತತ್ವಗಳನ್ನು ತಮ್ಮ ಸಂಗೀತ ಮತ್ತು ಸಾಹಿತ್ಯದಲ್ಲಿ ಅಳವಡಿಸಿಕೊಂಡು ಸಮಾಜಮುಖಿಯಾಗಿದ್ದರು.ಆದರೆ,ಇತ್ತೀಚಿಗೆ ಸಂಗೀತದಲ್ಲಿ ಕೇವಲ ಜನರಂಜನೆಗೆ ಮಾತ್ರ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದು ಜನಶಿಕ್ಷಣ ಮತ್ತು ಜನಕಲ್ಯಾಣ ಅಂಶಗಳು ವಿರಳವಾಗುತ್ತಿವೆ ಎಂದು ವಿಷಾದವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಯುವ ಸಾಹಿತಿ ರೇಣುಕಾಚಾರ್ಯ ಹಿರೇಮಠ ಮಾತನಾಡಿ, ಅನ್ಯಭಾಷೆಗಳ ಪ್ರಭಾವಗಳ ಮಧ್ಯೆಯೂ ಬೆಂಗಳೂರಿನಲ್ಲಿ ಕನ್ನಡವನ್ನು ಉಳಿಸಿ,ಬೆಳೆಸುವಲ್ಲಿ ತಮ್ಮದೇ ಆದ ವಿಶಿಷ್ಟ ಕೊಡುಗೆ ನೀಡುತ್ತಿರುವ ಶರಣ್ಸ್ ಮ್ಯೂಜಿಕ್ ಅಕಾಡೆಮಿಯ ಕಾರ್ಯವನ್ನು ಶ್ಲಾಘಿಸಿದರು.

ಹಿರಿಯ ರಂಗಕರ್ಮಿಗಳಾದ ಶ್ರೀಯುತ ಜ್ಞಫರ್ ಮೊಹಿಯುದ್ದೀನ್ , ಸದಾಶಿವ ಕಾಂಬಳೆ, ಅಧ್ಯಕ್ಷರು, ಬೆಂಗಳೂರು ಜಲಮಂಡಳಿ ಪ. ಜಾ. ಮತ್ತು ಪ. ಪಂ ನೌಕರರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಅಕ್ಷತಾ ಅರ್ ಮುರಗೋಡರವರು ಉಪಸ್ಥಿತರಿದ್ದರು. ಅಕಾಡೆಮಿಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಪಂ. ಶರಣ್ ಚೌಧರಿ ರವರ ಮಾರ್ಗದರ್ಶನದಲ್ಲಿ ಕನ್ನಡದ ಸುಪ್ರಸಿದ್ಧ ಗೀತೆಗಳನ್ನು ವಿವಿಧ ಕಲಾವಿದರು ಪ್ರಸ್ತುತಪಡಿದರು.ಕಲಾದೇಗುಲ ಶ್ರೀನಿವಾಸ್ ರವರು ನಿರೂಪಿಸಿ ವಂದಿಸಿದರು.

ಒನಕೆ ಓಬವ್ವ ಮಹಿಳೆಯರಿಗೆ ಮಾದರಿ

ರಬಕವಿ-ಬನಹಟ್ಟಿ : ಚಿತ್ರದುರ್ಗದ ಕೋಟೆಯ ರಕ್ಷಣೆಯನ್ನು ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಒನಕೆ ಓಬವ್ವ ಮಹಿಳೆಯರಿಗೆ ಮಾದರಿ. ಇಂದಿನ ಯುವತಿಯರಿಗೆ ನಮ್ಮ ನಾಡಿನ ಇತಿಹಾಸ, ಪರಂಪರೆ ಮತ್ತು ಅದರ ಮಹತ್ವವನ್ನು ತಿಳಿಸುವ ದಿಶೆಯಲ್ಲಿ ಗಮನ ನೀಡಬೇಕು ಎಂದು ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿ ತಿಳಿಸಿದರು. ಅವರು ಸೋಮವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಒನಕೆ ಓಬವ್ವಳ ಜಯಂತ್ಯೋತ್ಸವದ ಅಂಗವಾಗಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ಮಹಾತ್ಮರು, ಸಂತರು, ಪುಣ್ಯ ಪುರುಷರನ್ನು ಎಲ್ಲ ಸಮುದಾಯದವರು ಸ್ಮರಿಸುವಂತಾಗಬೇಕು. ಇವರೆಲ್ಲರೂ ಯಾವುದೇ ಒಂದು ಸಮುದಾಯಕ್ಕೆ ಸಿಮೀತರಾದವರಲ್ಲ. ಆಚರಣೆಗಳ ದಿನದಂದು ಮಹಾತ್ಮರ ಕುರಿತು ಚಿಂತನೆಯನ್ನು ಮಾಡುವಂತಾಗಬೇಕು ಎಂದು ತಹಶೀಲ್ದಾರ್ ಸ್ವಾದಿ ತಿಳಿಸಿದರು.

ಶಿರಸ್ತೆದಾರ ರಾಜಶೇಖರ ಸಾತಿಹಾಳ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ರವಿ ಈಟಿ, ಪ್ರಕಾಶ ಸಿಂಗೆ ಸೇರಿದಂತೆ ಸಮಾಜದ ಪ್ರಮುಖರು ಹಾಜರಿದ್ದರು.

ಮನೆಯ ಹೆಣ್ಣು ಮಗು ಶಕ್ತಿಯ ರೂಪ

ಬನಹಟ್ಟಿ : ಮಣ್ಣು, ನೀರು, ಗಾಳಿ, ಬೆಂಕಿ ಮತ್ತು ಆಕಾಶಗಳು ಶಕ್ತಿಯ ರೂಪಗಳು. ಇವುಗಳಿಗೆ ಹಾನಿ ಉಂಟಾಗದಂತೆ ನೋಡಿಕೊಳ್ಳಬೇಕು. ಮನೆಯಲ್ಲಿರುವ ಹೆಣ್ಣು ಮಕ್ಕಳು ಕೂಡಾ ಶಕ್ತಿಯ ರೂಪವಾಗಿದ್ದು, ನಾವು ಮಹಿಳೆಯರನ್ನು ಗೌರವಿಸಬೇಕು. ಅವರಿಗೂ ಕೂಡಾ ಸೂಕ್ತವಾದ ಸ್ಥಾನ ಮಾನಗಳನ್ನು ನೀಡಬೇಕು. ಅವರ ವಿರುದ್ಧ ನಡೆಯುತ್ತಿರುವ ಅನ್ಯಾಯಗಳು ಕಡಿಮೆಯಾಗಬೇಕು ಎಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಅವರು ಇಲ್ಲಿನ ಸಿದ್ಧಾರೂಢ ಮಠದಲ್ಲಿ ವಿಘ್ನೇಶ್ವರ ಮತ್ತು ರಾಜರಾಜೇಶ್ವರಿ ಮೂರ್ತಿಗಳ ಪ್ರತಿಷ್ಠಾಪನೆಯ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹೆಣ್ಣು ಮಕ್ಕಳನ್ನು ಗೌರವಿಸುವುದೇ ನಾವು ದೇವಿಗೆ ಸಲ್ಲಿಸುವ ನಿಜವಾದ ಪೂಜೆಯಾಗಿದೆ. ಇಂದಿನ ಮಹಿಳೆಯರಿಗೆ ದೇವಸ್ಥಾನಗಳಲ್ಲಿ ಪೂಜೆಯನ್ನು ಮಾಡುವ ಅವಕಾಶಗಳನ್ನು ನೀಡುವುದರ ಜೊತೆಗೆ ಅವರು ಕೂಡಾ ವೈದಿಕ, ವೇದ ಮತ್ತು ಮಂತ್ರಗಳನ್ನು ಪೂಜೆ ಪುನಸ್ಕಾರಗಳನ್ನು ಮಾಡುವಂತಾದರೆ ಮಾತ್ರ ಮಹಿಳೆಯರಿಗೆ ಸಮಾನತೆಯನ್ನು ನೀಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಚಿಂತನೆ ಮತ್ತು ಜಾಗೃತಿ ಅಗತ್ಯವಾಗಿದೆ. ಭಾರತದಲ್ಲಿ ಒಟ್ಟು 52 ಶಕ್ತಿ ಪೀಠಗಳನ್ನು ಸ್ಥಾಪಿಸಲಾಗಿದೆ. ದೇವಿಯ ಆರಾಧನೆ ಮತ್ತು ಉಪಾಸನೆ ಮಹತ್ವವಾದುದು ಎಂದು ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು. ಬೈಲಹೊಂಗಲದ ಮಹಾದೇವ ಸರಸ್ವತಿ ಸ್ವಾಮೀಜಿ ಮಾತನಾಡಿ, ಸೃಷ್ಟಿಯ ಮೂಲವೇ ಶ್ರೀದೇವಿ ಆದಿ ಶಕ್ತಿ. ಹೆಣ್ಣು ಮಕ್ಕಳು ಆದಿಶಕ್ತಿಯ ಅವತಾರ ಎಂದರು. ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು ಮತ್ತು ಅಗ್ರಾಣಿಪ್ಪ ಬುದ್ನಿ ಗುರುಗಳು ಮಾತನಾಡಿದರು.

ಮೂರ್ತಿ ಪ್ರತಿಷ್ಠಾಪನೆಗೆ ಸಹಾಯ ಸಹಕಾರ ನೀಡಿದವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ವಿರುಪಾಕ್ಷಪ್ಪ ಕೊಕಟನೂರ, ರಾಮಣ್ಣ ಭದ್ರನವರ, ಶಂಕರ ಜಾಲಿಗಿಡದ, ಕಲ್ಲಪ್ಪ ಪತ್ತಾರ, ಬಸಪ್ಪ ಕೊಣ್ಣೂರ, ರಮೇಶ ಕೊಣ್ಣೂರ, ಮಲ್ಲೇಶಪ್ಪ ಕುಚನೂರ, ಬಸವರಾಜ ಸುಲ್ತಾನಪುರ, ಪ್ರಕಾಶ ಬುರುಡ, ರಮೇಶ ಸೋರಗಾಂವಿ, ರಾಜು ಪಿಟಗಿ, ವೈ. ಬಿ. ಕೊರಡೂರ, ರಜನಿ ಶೇಠೆ, ಮಹಾದೇವಿ ಸುಟ್ಟಟ್ಟಿ, ಲಕ್ಷ್ಮಿ ನಿಂಬರಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪನೆ ನಿಮಿತ್ತ 111 ಮಠಾಧೀಶರ ಪಾದ ಪೂಜೆ ನೆರವೇರಿಸಿದ ಭಕ್ತರು!

ತೇರದಾಳ : ಭಕ್ತರ ದೇಣಿಗೆ ಹಣದಿಂದಲೇ ನಿರ್ಮಾಣಗೊಂಡಿರುವ ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ನಿಮಿತ್ತ ಭಾನುವಾರ ಬೆಳಗ್ಗೆ ಪ್ರಭುದೇವರ ದೇವಸ್ಥಾನ ಆವರಣದಲ್ಲಿ ಇದೇ ಮೊದಲ ಬಾರಿಗೆ ತೇರದಾಳ ಸೇರಿದಂತೆ ಬೇರೆ ಬೇರೆ ಊರಿನ ಭಕ್ತರಿಂದ ನಾಡಿನ ವಿವಿಧ ಮಠಗಳ 111 ಮಠಾಧೀಶರ ಸಾಮೂಹಿಕ ಪಾದಪೂಜೆ ಶ್ರದ್ಧಾ ಭಕ್ತಿಯಿಂದ ಜರುಗಿತು.

ಭಕ್ತರು ಶ್ರೀಗಳ ಪಾದಪೂಜೆ ನೆರವೇರಿಸುವ ವೇಳೆ ಅಲ್ಲಮಪ್ರಭುದೇವರ ಅರ್ಚಕರು ಸೇರಿದಂತೆ ಬೇರೆ ಬೇರೆ ಅರ್ಚಕರು ವೇದ ಘೋಷಗಳನ್ನು ಸಾಮೂಹಿಕವಾಗಿ ಮೊಳಗಿಸಿದರು. ಪಾದಪೂಜೆಗೆ ನಿಯೋಜನೆಗೊಂಡಿದ್ದ ಶ್ರೀಗಳಿಗೆ ಸಸಿಗಳನ್ನು ನೀಡುವ ಮೂಲಕ ಹೊಸತನಕ್ಕೆ ಸಾಕ್ಷಿಯಾದರು. ಹಂದಿಗುಂದದ ಶಿವಾನಂದ ಶ್ರೀ, ಶೇಗುಣಸಿಯ ಡಾ. ಮಹಾಂತಪ್ರಭು ಶ್ರೀ, ಚಿಮ್ಮಡದ ಪ್ರಭು ಶ್ರೀ, ಸ್ಥಳೀಯ ಹಿರೇಮಠದ ಗಂಗಾಧರ ದೇವರು, ಜಮಖಂಡಿ ಮುತ್ತಿನಕಂತಿನಮಠದ ಶಿವಲಿಂಗ ಪಂಡಿತಾರಾಧ್ಯ ಶಿವಾಚಾರ್ಯ, ಬನಹಟ್ಟಿಯ ಶರಣಬಸವ ಶಿವಾಚಾರ್ಯ, ರಬಕವಿ ಬ್ರಹ್ಮಾನಂದ ಆಶ್ರಮದ ಗುರುಸಿದ್ದೇಶ್ವರ ಶ್ರೀ, ಬಂಡಿಗಣಿಯ ಅನ್ನದಾನೇಶ್ವರ ಬಸವಗೋಪಾಲ ಶ್ರೀ, ಮರೆಗುದ್ದಿ ಸಿದ್ದರಾಮ ಶ್ರೀ, ವಿರುಪಾಕ್ಷ ದೇವರು ಸೇರಿದಂತೆ ವಿವಿಧ ಮಠಾಧೀಶರು ಇದ್ದರು. ದೇವಸ್ಥಾನ ಲೋಕಾರ್ಪಣೆ ನಿಮಿತ್ತ ದೇವಸ್ಥಾನವನ್ನು ಹೂವು ವಿದ್ಯುತ್ ದೀಪಗಳಿಂದ ಶೃಂಗಾರಗೊಳಿಸಲಾಗಿದ್ದು, ಭಕ್ತರ ಕಣ್ಮನ ಸೆಳೆಯುತ್ತಿದೆ. ಮಹಾರಾಷ್ಟ್ರದ ಪುಣೆ, ಸಾಂಗಲಿ, ಕೋಲ್ಹಾಪುರ, ಮಿರಜ್, ಇಂಚಲಕರಂಜಿ, ರಾಜ್ಯದ ಬೆಂಗಳೂರು, ಬೆಳಗಾವಿ, ಧಾರವಾಡ, ವಿಜಯಪುರ, ಬಾಗಲಕೋಟೆ, ಕಲಬುರಗಿ, ದಾವಣಗೇರಿ ಜಿಲ್ಲೆ ಸೇರಿಂದಂತೆ ಬೇರೆ ಬೇರೆ ಜಿಲ್ಲೆಗಳಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತಾಧಿಗಳು ಆಗಮಿಸಿದ್ದರು.

ಬೈಕ್ ಸ

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪಾರಿಜಾತ ಕಲಾವಿದ ಸಿದ್ದಪ್ಪ ಕುರಿ ಅವರಿಗೆ ಸನ್ಮಾನ



ಲೋಕಾಪುರ : ಭಾರತೀಯ ಸಂಸ್ಕೃತಿಯ ಜೀವಂತಿ–ಕೆ ಜಾನಪದ ಕಲೆ ಎಂದೂ ಸಂಬೋಧಿಸಲಾಗುತ್ತಿದ್ದರೂ ಜಾನಪದ ಪ್ರಕಾರಗಳನ್ನು ಪ್ರೋತ್ಸಾಹಿಸುವ ಹಾಗೂ ಕಲಾವಿದರನ್ನು ಗೌರವಿಸುವುದು ತೀರಾ ವಿರಳ ಎಂದು ಜ್ಞಾನೇಶ್ವರ ಮಠದ ಪೀಠಾಧಿಕಾರಿ ಬ್ರಹ್ಮಾನಂದ ಶ್ರೀಗಳು ಹೇಳಿದರು.

ಪಟ್ಟಣದ ಹಿಂದೂ–ಮುಸ್ಲಿಂ ಭಾವೈಕ್ಯತೆಯ ಶ್ರೀ ಜ್ಞಾನೇಶ್ವರ ಮಠದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪಾರಿಜಾತ ಕಲಾವಿದ ಸಿದ್ದಪ್ಪ ಕುರಿ ಅವರನ್ನು ಸನ್ಮಾನಿಸಿ ಮಾತನಾಡಿದ ಶ್ರೀಗಳು ಕಲಾವಿದನಿಗೆ ಅನೇಕ ರೀತಿಯ ಮಾನ, ಸನ್ಮಾನ, ಮನ್ನಣೆ ಗೌರವ ಸಿಗುತ್ತದೆ, ಆದರೆ ಕಲಾವಿದನ ಪ್ರತಿಭೆಯನ್ನು ಪ್ರೇಕ್ಷಕ ವರ್ಗ ಗುರುತಿಸಿ, ಅಸ್ವಾದಿಸಿದಾಗ ಮಾತ್ರ ನಿಜವಾದ ಸಂತೃಪ್ತಿ ಸಿಕ್ಕುತ್ತದೆ. ಬಡ ಕಲಾವಿದರನ್ನು ಗುರುತಿಸಿದಾಗ ಮಾತ್ರ ಬಹು ದೊಡ್ಡ ಸಮಾಧಾನವಾಗುತ್ತದೆ, ಪಾರಿಜಾತ ಅಭಿನಯವನ್ನು ಗುರುತಿಸಿ ನೇಪಥ್ಯದಲ್ಲಿ ಬಂದು ಅಭಿಮಾನ ಪೂರ್ವಕವಾಗಿ ಹೃದಯತುಂಬಿ ಮಾತನಾಡಿಸುವ ಅಭಿಮಾನಿಗಳೇ ಕಲಾವಿದರ ನಿಜವಾದ ಸಂಪತ್ತು ಎಂದು ಹೇಳಿದರು.

ಗಣಿ ಉದ್ಯಮಿ ಎಂ.ಎಂ. ವಿರ್ತಕಮಠ ಮಾತನಾಡಿ ಇವರ ಪಾರಿಜಾತ ಕಲೆಯನ್ನು ಗಮನಿಸಿ ನಾಡಿನಾದ್ಯಂತ ಹಲವಾರು ಸಂಘ ಸಂಸ್ಥೆ, ಪ್ರತಿಷ್ಠಾನ ಸರಕಾರಿಗಳು ಪ್ರಶಸ್ತಿ ಪುರಸ್ಕಾರಗಳಿಂದ ಗೌರವಿಸಿವೆ, ಜಾನಪದ ಕಲಾವಿದರನ್ನು ಗುರುತಿಸಿ, ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವುದರೊಂದಿಗೆ ಹಿರಿಯ ಕಲಾವಿದರಿಗೆ ಮಠದ ಸನ್ಮಾನಿಸುತ್ತಿರುವುದು ಕಾರ್ಯ ಶ್ಲಾಘನೀಯ ಎಂದರು.

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಕಲಾವಿದರಾದ ದುರಗವ್ವ ರೊಡ್ಡಪ್ಪನವರ, ರತ್ನಾ ಕಾಳಮ್ಮನವರ ಜ್ಞಾನೇಶ್ವರ ಮಠದಿಂದ ಸನ್ಮಾನಿಸಲಾಯಿತು.

ಕಲಾವಿದ ಕೃಷ್ಣಾ ಭಜಂತ್ರಿ, ಸದಾಶಿವ ಉದಪುಡಿ, ಬಸವರಾಜ ಕಾತರಕಿ, ಭೀಮನಗೌಡ ಪಾಟೀಲ, ಪ್ರವೀಣ ಗಂಗಣ್ಣವರ, ಎಸ್.ಎಸ್. ಕೊಲ್ಹಾರ, ತಾಲೂಕಾ ಕಸಪಾ ಅಧ್ಯಕ್ಷ ಆನಂದ ಪೂಜಾರ, ಡಾ. ಲೋಕಣ್ಣ ಭಜಂತ್ರಿ, ಪರಪ್ಪಗೌಡ, ಎಸ್.ಎಂ.ರಾಮದುರ್ಗ, ಸಂಗಮೇಶ ಶಿರಗುಂಪಿ, ಅಲ್ಲಾಭಕ್ಷ ಭಾಗವಾನ, ಸಿದ್ದು ಹಿರೇಮಠ, ತಾಲೂಕಾ ಕಜಪ ಅಧ್ಯಕ್ಷ ರಮೇಶ ಅರಕೇರಿ, ಹಣಮಂತ ಬುದ್ನಿ, ಮಲ್ಲಯ್ಯ ಸಂಬಾಳದ, ಭಾಗ್ಯಶ್ರೀ ಪಾಟೀಲ, ವಿಜಯಲಕ್ಷ್ಮೀ ಕುಂದರಗಿ, ಪ್ರಕಾಶ ಕರಡಿಗುಡ್ಡ, ಪ್ರಭು ಹೊನವಾಡ, ಮುತ್ತು ತುಂಗಳ ಅಪಾರ ಕಲಾವಿದ ಬಳಗ, ಶಿಕ್ಷಕವೃಂದ, ಮಠದ ಸದ್ಭಕ್ತರು ಇದ್ದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಉತ್ತಮ ಶ್ರಮ, ಶ್ರೇಷ್ಟ ಗುರಿಯಿಂದ ಯಶಸ್ಸು ಸಾಧ್ಯ: ಡಾ. ಗದಿಗೆಪ್ಪ ಮೂರಮಟ್ಟಿ

ಬಾಗಲಕೋಟೆ : ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಉತ್ತಮ ಶ್ರಮ ಹಾಗೂ ಶ್ರೇಷ್ಟ ಗು–ರಿಯಿಂದ ಯಶಸ್ಸನ್ನು ಸಾಧಿಸಬಹುದೆಂದು ಹೈದರಾಬಾದಿನ ಅಗ್ರಿ ಬ್ಯೂಜನೆಸ್ ಮ್ಯಾನೇಜಮೆಂಟನ ಸಹಾಯಕ ಪ್ರಾಧ್ಯಾಪಕರಾದ ಡಾ. ಗದಿಗೆಪ್ಪ ಮೂರಮಟ್ಟಿ ಹೇಳಿದರು.

ಅವರು ನಗರದ ಬಿ.ವಿ.ವಿ.ಸಂಘದ ಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ 2024–25 ನೇ ಸಾಲಿನ ಸಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಒಳ್ಳೆಯ ಹವ್ಯಾಸ, ಸಮಯ ನಿರ್ವಹಣೆ ಮತ್ತು ಸತತ ಪರಿಶ್ರಮದಿಂದ ಅಂದುಕೊಂಡದ್ದನ್ನು ಸಾಧಿಸಲುನಮ್ಮೆಲ್ಲರಿಗುಸಾಧ್ಯವಿದೆ.ಹುಟ್ಟುನಮ್ಮ ಕೈಯಲ್ಲಿಲ್ಲ ಬೆಳೆಯುವುದು ನಮ್ಮ ಕೈಯಲ್ಲಿದ್ದು ಅದನ್ನು ಅಸಾಮಾನ್ಯವಾಗಿಸಿಕೊಳ್ಳಬಹುದು, ನಾವು ಜೀವನದಲ್ಲಿ "ಶ್ರೇಷ್ಟ ಗು–ರಿಯನ್ನಿಟ್ಟುಕೊಂಡು ಯಶಸ್ಸನ್ನು ಸಾಧಿಸಿದರೆ ಸಮಾಜದ ಮತ್ತು ತಂದೆ ತಾಯಿಯರ ಋಣ ತೀರಿಸಿದಂತಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಲೇಜುಗಳ ಆಡಳಿತ ಮಂಡಳಿಯ ಕಾರ್ಯಧ್ಯಕ್ಷರಾದ ಮಾನ್ಯ ಗುರುಬಸವ ಸೂಳಿಭಾವಿ ನಮ್ಮ ಸಂಸ್ಥೆ ತುಂಬಾ ಹಳೆಯ ಸಂಸ್ಥೆಯಾಗಿದ್ದು ವಿಶ್ವವಿದ್ಯಾಲಯದಲ್ಲೂ ಇಲ್ಲದ ಎಲ್ಲಾ ಅನುಕೂಲಗಳು ನಮ್ಮ ಮಹಾವಿದ್ಯಾಲಯದಲ್ಲಿದ್ದು ವಿದ್ಯಾರ್ಥಿಗಳು ಅವುಗಳನ್ನು ಉಪಯೋಗಿಸಿಕೊಂಡು ಸಾಮಾನ್ಯ ಸ್ಥರದಿಂದ ಬಂದ ಮಕ್ಕಳಂತೆ ತುಂಬಾ ಆಸಕ್ತಿವಹಿಸಿ ಅಧ್ಯಯನ ಮಾಡಿ ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ನಮ್ಮ ಸಂಸ್ಥೆ ಮತ್ತು ನಿಮ್ಮ ತಂದೆ–ತಾಯಿಗಳಿಗೆ ಕೀರ್ತಿ ತರಬೇಕೆಂದು ಮಾತನಾಡಿದರು.

ಈ ಕಾರ್ಯಕ್ರಮದ ವೇದಿಕೆಯ ಮೇಲೆ ಐ.ಕ್ಯೂ.ಎ.ಸಿ. ಸಂಯೋಜಕರಾದ ಡಾ. ಡಿ. ಎಸ್. ಲಮಾಣಿ, ವಿದ್ಯಾರ್ಥಿ ಕಲ್ಯಾಣಾಧಿಕಾ–ರಿಯಾದ ಪ್ರೊ. ಶ್ರೀಮತಿ. ವಿ. ಎನ್. ವನಕುದರೆ ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳಾದ ಕು. ಅಶ್ವಿನಿ ಚಿಲಮೂರ, ಕುಮಾರ ಅಜಯಕುಮಾರ ನಾಯಕ ಉಪಸ್ಥಿತರಿದ್ದರು. ವಿದ್ಯಾರ್ಥಿಯಾದ ಶಿವಾನಂದ ಮಡಿವಾಳರಿಂದ ಪ್ರಾರ್ಥ–ನೆ ಸಲ್ಲಿಸಿದರು, ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಎಸ್. ಎಮ್. ಗಾಂವಕರ ಸ್ವಾಗತಿಸಿದರು.

ಪ್ರೊ.ಶ್ರೀಮತಿ.ಎಸ್.ಆರ್.ದೇಶಪಾಂಡೆಯವ–ರಿಂದ ಪರಿಚಯಿಸಿದರು, ಪ್ರೊ.. ಲಕ್ಷ್ಮೀ ರಾಠೋಡರಿಂದ ವಂದಸಿದರು, ಪ್ರೊ. ಶ್ರೀಮತಿ. ಮಹಾನಂದ ಮಠ ಕಾರ್ಯಕ್ರಮ ನೀರೂಪಿಸಿದರು.

ನೀರು ಭಗವಂತ ಕೊಟ್ಟ ಪ್ರಸಾದ: ಸಂಸದ ಈರಣ್ಣ ಕಡಾಡಿ

ಮೂಡಲಗಿ : ನೀರು ಭಗವಂತ ಕೊಟ್ಟ ಪ್ರಸಾದ ಅದರ ಪ್ರತಿ ಹನಿ ಹನಿಯೂ ಸದ್ವಿನಿಯೋಗವಾಗಬೇಕು ಮತ್ತು ಇಳಿಜಾರಿನಲ್ಲಿ ಓಡುವ ನೀರನ್ನು ತಡೆ ಹಿಡಿದು ಅಂತರ್ಜಲ ಮಟ್ಟ ಹೆಚ್ಚಿಸಿಕೊಳ್ಳುವುದು ಇಂದಿನ ಅವಶ್ಯಕತೆ ಆಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಹೇಳಿದರು.

ಶುಕ್ರವಾರ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಅನುದಾನದಡಿ ಕಲ್ಲೋಳಿಯಿಂದ ರಾಜಾಪೂರ ರಸ್ತೆಯ ಕರೆಮ್ಮನ ಗುಡಿ ಹಳ್ಳದ ಹತ್ತಿರ ಕೃಷಿ ಭೂಮಿಗೆ ತೆರಳುವವರಿಗೆ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಮತ್ತು ಮಳೆ ನೀರು ಸಂಗ್ರಹಿಸಿ ಸುತ್ತಲಿನ ಪರಿಸರದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸಲು ಅನುಕೂಲವಾಗಲೆಂದು 1 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡ ಬ್ರಿಡ್ಜ್ ಕಮ್ ಬ್ಯಾರೇಜ್ ಕಾಮಗಾರಿಯನ್ನು ಉದ್ಘಾಟಿಸಿ ಮಾತನಾಡಿದರು.

ಈ ಕಾಮಗಾರಿಯಿಂದ ಎರಡು ಗ್ರಾಮಗಳಿಗೆ ರಸ್ತೆ ಸಂಪರ್ಕ ಸರಳವಾಗಲಿದೆ ಮತ್ತು ರೈತರಿಗೆ ಪರೋಕ್ಷ ನೀರಾವರಿ ಸೌಲಭ್ಯದ ಅನುಕೂಲವಾಗಿದೆ. ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು ಹೇಳಿದರು.

ರಾಜಾಪೂರ ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷ ಕೆಂಪಣ್ಣ ಗಡಹಿಂಗ್ಲೆಜ್, ಸದಸ್ಯರಾದ ಸಿದ್ರಾಯ ಮರಿಸಿದ್ದಪ್ಪಗೊಳ, ಪುಂಡಲಿಕ ಕಮತಿ, ಗೋಪಾಲ ಕಮತಿ, ಚುನ್ನಮ್ಮ ದೇವಿ ಸಮಿತಿ ಅಧ್ಯಕ್ಷ ಸಿದ್ದಪ್ಪ ಜಟೆನ್ನವರ, ರಾಮಚಂದ್ರ ಕೋಡ್ಲಿ, ಲಕ್ಷ್ಮಣ ನಾಯಕ, ಸುರೇಶ ಬೈರುಗೋಳ, ಶೆಟ್ಟೆಪ್ಪ ಪಂಡ್ರೋಳಿ, ವಿಠ್ಠಲ ಎಣ್ಣಿ, ಮಾರುತಿ ಕಮನೂರೆ, ಬಸವರಾಜ ಕಮನೂರೆ, ಗೋಪಾಲ ಅಥಣಿ, ಪರಪ್ಪ ಕಡಾಡಿ, ಈಶ್ವರ ಬೆಳಕೂಡ, ಕಿರಣ ಕಡಾಡಿ, ಶಿವಾನಂದ ಕಡಾಡಿ, ಜಗದೀಶ ಗೊರಗುದ್ದಿ, ಲಗಮಣ್ಣ ಸಿದ್ದಪ್ಪ ಹೆಬ್ಬಾಳ, ಗುತ್ತಿಗೆದಾರ ಈರಣ್ಣ ಮುನ್ನೋಳಿಮಠ ಸೇರಿದಂತೆ ಅನೇಕ ರೈತರು ಉಪಸ್ಥಿತರಿದ್ದರು.

ಧರ್ಮ ಹೋದರೆ ಭಾರತ ಉಳಿಯುವದಿಲ್ಲ, ಧರ್ಮಕ್ಕೆ ಮಹತ್ವ ಸ್ಥಾನವಿದೆ: ಗಂಗಾಧರೇಂದ್ರ ಸರಸ್ವತಿ ಶ್ರೀ

ಇಂಡಿ : ಧರ್ಮ ಹೋದರೆ ಭಾರತ ಉಳಿಯುವದಿಲ್ಲ, ಧರ್ಮಕ್ಕೆ ದೇಶದಲ್ಲಿ ಮಹತ್ವದ ಸ್ಥಾನವಿದೆ. ಧರ್ಮದ ಆತ್ಮ ಆಧ್ಯಾತ್ಮ. ಧರ್ಮದ ಸಾರ ಅಧ್ಯಾತ್ಮ, ಜೀವನವು ಪರಮಾತ್ಮನ ಕಡೆಗೆ ಸಾಗುವ ಮಾರ್ಗ, ಧರ್ಮದಲ್ಲಿ ಆಧ್ಯಾತ್ಮ ಮುಖ್ಯ ಮತ್ತು ಆಧ್ಯಾತ್ಮದ ಆತ್ಮ ಭಗವದ್ಗೀತೆ ಎಂದು ಪರಮಪೂಜ್ಯ ಗಂಗಾಧರೇಂದ್ರ ಸರಸ್ವತಿ ಶ್ರೀಗಳು ಹೇಳಿದರು.

ಪಟ್ಟಣದ ಶಂಕರ ಪಾರ್ವತಿ ಮಂಗಲ ಕಾರ್ಯಾಲಯದಲ್ಲಿ ಶ್ರೀ ಸೋಂದಾ ಸ್ವರ್ಣವಲ್ಲಿ ಪ್ರತಿಷ್ಠಾನದಿಂದ ಶ್ರೀ ಭಗವದ್ಗೀತಾ ಕರ್ನಾಟಕ ಅಭಿಯಾನದಿಂದ ನಡೆದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ಮಾನವನಿಗೆ ನಕಾರಾತ್ಮಕ ಚಿಂತನೆಗಳಾದ ಮನೋರೋಗ, ಮಧುಮೇಹ ರಕ್ತದ ಒತ್ತಡ, ಮತ್ತು ಹೃದಯ ಕಾಯಿಲೆ ಬರುತ್ತಿದ್ದು ಸಕಾರಾತ್ಮಕ ಚಿಂತನೆಗಳಿಗಾಗಿ ಭಗವದ್ಗೀತೆ ಓದುವದರಿಂದ ಬರುತ್ತದೆ ಎಂದರು.

ಸಾನಿಧ್ಯ ವಹಿಸಿದ ಸ್ವರೂಪಾನಂದ ಶ್ರೀಗಳು ಮಾತನಾಡಿ, ಬದುಕುವ ಕಲೆ ಕಲಿಸುವ ಗ್ರಂಥ ಭಗವದ್ಗೀತೆ, ವಿಶ್ವಮಾನ್ಯ, ಸರ್ವಧರ್ಮ ಮಾನ್ಯ ಶ್ರೇಷ್ಠ ಗ್ರಂಥ, ಮನುಕುಲದ ಉದ್ಧಾರ ಮಾಡುವ ಗ್ರಂಥ ಭಗವದ್ಗೀತೆ. ಇತರೆ ಧರ್ಮದಲ್ಲಿ ಧರ್ಮದ ಗ್ರಂಥ ಪಠಣ ಮಾಡುತ್ತಾರೆ. ನಮ್ಮಲ್ಲಿ ಆ ಪದ್ಧತಿ ಇಲ್ಲ. ಅದನ್ನು ಜಾಗರೂಕತೆಯಿಂದ ನಮ್ಮ ಯುವಕರಿಗೆ ಮಕ್ಕಳಿಗೆ ತಿಳಿಸಬೇಕಾಗಿದೆ. ಈ ದಿಸೆಯಲ್ಲಿ ಪ್ರತಿ ಶಾಲೆಗೆ ಹೋಗಿ ಭಗವದ್ಗೀತೆ ಮಹತ್ವ ತಿಳಿ ಹೇಳುವ ಕಾರ್ಯಕ್ರಮ ಇಂದಿನಿಂದ ತಾಲೂಕಿನಲ್ಲಿ ಪ್ರಾರಂಭವಾಗುತ್ತದೆ ಎಂದರು.

ತಾಲೂಕಾ ಭಗವದ್ಗೀತೆ ಸಮಿತಿಯ ಅಧ್ಯಕ್ಷ ಕಾಸುಗೌಡ ಬಿರಾದಾರ, ಶಿಕ್ಷಕ ವಿ.ಜಿ. ಕಲ್ಮನಿ ಮಾತನಾಡಿದರು.

ಸಮಾರಂಭದಲ್ಲಿ ಸತೀಶಚಂದ್ರ ಕುಲಕರ್ಣಿ, ಮಲ್ಲಿಕಾರ್ಜುನ ಕಿವಡೆ, ಅನಿಲ ಜಮಾದಾರ, ಪ್ರಸನ್ನ ದೇಶಪಾಂಡೆ, ಅನಿಲಗೌಡ ಬಿರಾದಾರ, ವೇಂಕಟೇಶ ಕುಲಕರ್ಣಿ, ಡಾ. ಅರ್ಚನಾ ಕುಲಕರ್ಣಿ, ಡಿ.ಆರ್. ಶಹಾ, ಸಂಶೋಧಕ ಡಿ.ಎನ್.ಅಕ್ಕಿ, ನ್ಯಾಯವಾದಿ ಅಜೀತ ಧನಶೆಟ್ಟಿ ಮತ್ತಿತರಿದ್ದರು.

ರ್‍ಯಾಗಿಂಗ್ ವಿರೋಧಿ ಮಾರ್ಗಸೂಚಿಗಳ ಅರಿವು ಅಗತ್ಯ: ಪೇದೆ ಒಡೆಯರ

ಮೂಡಲಗಿ : ರ್‍ಯಾಗಿಂಗ್‌ನಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು ಕಾನೂನು ಬಾಹಿರ ಚಟುವಟಿಕೆಯಾಗಿದ್ದು ರ್‍ಯಾಗಿಂಗ್ ಪ್ರವೃತ್ತಿಯಿಂದ ವಿದ್ಯಾರ್ಥಿಗಳು ಬದಲಾಗಬೇಕು ಇಂದು ಅಧ್ಯಯನದ ಬದಲಾಗಿ ವಿದ್ಯಾರ್ಥಿಗಳ ಕಾಲೇಜು ಅವಧಿಗಳಲ್ಲಿ ತಮ್ಮ ಕೆಳದರ್ಜೆ ವಿದ್ಯಾರ್ಥಿಗಳ ಮೇಲೆ ರ್‍ಯಾಗಿಂಗ್ ಚಟುವಟಿಕೆಯಲ್ಲಿ ತೊಡಗಿ ಸಾಮಾಜಿಕ ಅಪರಾಧಕೃತ್ಯಗಳಲ್ಲಿ ಕಾರಣವಾಗುತ್ತಿದ್ದಾರೆ ಇದರಿಂದ ತಮ್ಮ ಅಮೂಲ್ಯವಾದ ಜೀವನವನ್ನು ರ್‍ಯಾಗಿಂಗ್ ಚಟುವಟಿಕೆ ಯಿಂದ ಹಾಳುಮಾಡಿಕೊಂಡು ಇನ್ನೊಬ್ಬ ವಿದ್ಯಾರ್ಥಿಯ ಭವಿಷ್ಯವನ್ನು ಹಾಳುಮಾಡುತಿರುವುದು ಸರ್ವೇಸಾಮನ್ಯವಾಗಿದೆ.

ಮತ್ತು ರ್‍ಯಾಗಿಂಗ್ ಚಟುವಟಿಕೆ ವಿದ್ಯಾರ್ಥಿಗಳ ಮಾರಣಾಂತಿಕ ಸ್ವರೂಪಕ್ಕೆ ಕಾರಣವಾಗುತ್ತಿದ್ದು. ವಿದ್ಯಾರ್ಥಿಗಳು ರ್‍ಯಾಗಿಂಗ್ ಪ್ರವೃತ್ತಿಯಿಂದ ದೂರವಿದ್ದು ತಮ್ಮ ಜೀವನವನ್ನು ಗುರುವಿನ ಮಾರ್ಗದರ್ಶನದಂತೆ ರೂಪಿಸಿಕೊಳ್ಳುವುದು ಅವಶ್ಯವಿದೆ ಎಂದು ಮೂಡಲಗಿ ಪೋಲಿಸ್ ಠಾಣೆಯ ಪೇದೆ ನಾಗಪ್ಪ ಒಡೆಯರ ಹೇಳಿದರು.

ಅವರು ಸ್ಥಳೀಯ ಆರ್.ಡಿ.ಎಸ್. ಕಲಾ, ವಾಣಿಜ್ಯ, ವಿಜ್ಞಾನ, ಸಮಾಜಕಾರ್ಯ ಪದವಿ ಮಹಾವಿದ್ಯಾಲಯದ ರ್‍ಯಾಗಿಂಗ್ ವಿರೋಧಿ ಘಟಕದ ಸಹಯೋಗದಲ್ಲಿ ಹಮ್ಮಿಕೊಂಡಿರುವ ಉಪನ್ಯಾಸ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ರ್‍ಯಾಗಿಂಗ್ ವಿರೋಧಿ ಕಾಯ್ದೆ ಹಾಗೂ ರ್‍ಯಾಗಿಂಗ್ ವಿರೋಧಿ ಮಾರ್ಗಸೂಚಿ ಬಗ್ಗೆ ಅಭಿಪ್ರಾಯಗಳನ್ನು ಆಭಿವ್ಯಕ್ತಪಡಿಸುತ್ತಾ ರ್‍ಯಾಗಿಂಗ್ ಮಾಡುವವರ ವಿರುದ್ಧ ಕಾನೂನುಗಳಲ್ಲಿ ಉಗ್ರಶಿಕ್ಷೆ ಇದ್ದು ಮಹಿಳೆಯರನ್ನು ಚುಡಾಯಿಸುವುದು, ಅಸಭ್ಯವಾಗಿ ತಮ್ಮ ಸಹಪಾಠಿಗಳನ್ನು ನಿಂದಿಸುವುದು ಮತ್ತು ಕಾಲೇಜು ವಾತಾವರಣದಲ್ಲಿ ಅಸಭ್ಯವಾಗಿ ವರ್ತಿಸುವುದು ಇನ್ನಿತರ ಅಸಭ್ಯ ವರ್ತನೆಗಳಿಂದ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳಬಾರದೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಸತ್ಯಪ್ಪ ಗೋಟೂರ ವಹಿಸಿಕೊಂಡು ಮಾತನಾಡುತ್ತಾ ವಿದ್ಯಾರ್ಥಿಗಳು ರ್‍ಯಾಗಿಂಗ್ ಚಟುವಟಿಕೆ ಅವರ ಬದುಕನ್ನು ನಾಶಮಾಡುತ್ತಿದೆ ಅದರಿಂದ ಎಚ್ಚರವಹಿಸಿ ತಮ್ಮ ವಿಷಯ ಅಧ್ಯಯನ ಕಡೆ ಹೆಚ್ಚು ಗಮನ ಕೊಡಬೇಕು ಇಂದು ಸಾಮಾಜಿಕ ವ್ಯವಸ್ಥೆಯಲ್ಲಿ ಅಳವಡಿಕೆಯಾದ ಮೊಬೈಲ್ ಮತ್ತು ಟಿ ವಿ. ಮಾಧ್ಯಮಗಳಿಂದ ಪ್ರಸಾರವಾಗುವ ಅಶ್ಲೀಲ ಸಂಭಾಷಣೆ & ದೃಶ್ಯಗಳನ್ನು ಗಮನಿಸಿ ಅದರಂತೆ ವಿದ್ಯಾರ್ಥಿಗಳನ್ನು ಚುಡಾಯಿಸುವುದು ಸರ್ವೇಸಾಮಾನ್ಯವಾಗಿದೆ ಇದರ ಬಗ್ಗೆ ವಿದ್ಯಾರ್ಥಿಗಳು ತಿಳಿವಳಿಕೆ ಹೊಂದಿ ತಪ್ಪು ಚಟುವಟಿಕೆಗಳಿಂದ ದೂರ ಇರಬೇಕೆಂದರು.

ಕಾರ್ಯಕ್ರಮದಲ್ಲಿ ಕಾಲೇಜು ಉಪನ್ಯಾಸಕರಾದ ಗೀತಾ ಹಿರೇಮಠ, ಸಂಜೀವ ಮಂಟೂರ, ಡಾ.ಪ್ರಶಾಂತ ಮಾವರಕರ, ಸುನೀಲ ಸತ್ತಿ, ರಶ್ಮೀ ಕಳ್ಳಿಮನಿ, ಕವಿತಾ ಸಿದ್ದಾಪೂರ, ಮತ್ತಿತರರು ಭಾಗವಹಿಸಿದ್ದರು.

ಉಪನ್ಯಾಸಕ ಮಲ್ಲಪ್ಪ ಪಾಟೀಲ ನಿರೂಪಿಸಿದರು ಉಪನ್ಯಾಸಕಿ ರೋಹಿಣಿ ಕಾಂಬಳೆ ಸ್ವಾಗತಿಸಿದರು, ರಾಜು ಪತ್ತಾರ ವಂದಿಸಿದರು.

ಭಕ್ತ ಕನಕದಾಸರ ಜಯಂತಿ: ಪೂರ್ವಭಾವಿ ಸಿದ್ಧತಾ ಸಭೆ

ನವಲಗುಂದ : ಸರ್ಕಾರದ ನಿರ್ದೇಶನದಂತೆ ಭಕ್ತ ಕನಕದಾಸರ ಜಯಂತಿ ಕಾರ್ಯಕ್ರಮವನ್ನು ನ. 18 ಸೋಮವಾರ ದಂದು ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ತಹಶೀಲ್ದಾರ ಸುಧೀರ ಸಾಹುಕಾರ ತಿಳಿಸಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ನಡೆದ ಭಕ್ತ ಕನಕದಾಸ ಜಯಂತಿ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಸರ್ಕಾರಿ ಕಚೇರಿಗಳಲ್ಲಿ ಭಕ್ತ ಕನಕದಾಸರ ಭಾವಚಿತ್ರ ಪೂಜೆ ಸಲ್ಲಿಸಲು ನಿರ್ದೇಶನ ನೀಡಲಾಗಿದೆ.

ಕಾರ್ಯಕ್ರಮದಲ್ಲಿ ಕನಕದಾಸ ಕುರಿತು ಉಪನ್ಯಾಸ ನೀಡಲು ಸಂಪನ್ಮೂಲ ವ್ಯಕ್ತಿಯನ್ನು ನೇಮಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಪಾಲ್ಗೊಳುವಂತೆ ಕರೆ ನೀಡಿದರು.

ಹಾಲುಮತ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿಯಾದ ಪ್ರೇಮಾ ನಾಯ್ಕರ ಮಾತನಾಡಿ ದಾಸ ಶ್ರೇಷ್ಠ ಕನಕದಾಸರು ಬರೀ ಕುರುಬ ಸಮಾಜಕ್ಕೆ ಸೀಮಿತರಾಗದೆ ಸರ್ವ ಜನಾಂಗದ ಶೋಷಿತರ ಧ್ವನಿಯಾಗಿದ್ದವರು. ಹೀಗಾಗಿ ತಾಲ್ಲೂಕಿನ ಸರ್ವ ಸಮಾಜದ ಮುಖಂಡರ ಜೊತೆಗೆ ಕುರುಬ ಸಮಾಜದ ಯುವಕರನ್ನು ಮುಖಂಡರನ್ನು ಒಗ್ಗೂಡಿಸುವುದರ ಜೊತೆಗೆ ಕುರುಬ ಸಮುದಾಯದ ಕಟ್ಟಕಡೆಯ ವ್ಯಕ್ತಿಯನ್ನು ಸೇರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಿದೆ.

ತಾಲ್ಲೂಕಿನ ಗ್ರಾಮೀಣ ಹಾಗೂ ನಗರದ ಎಲ್ಲಾ ಬ